# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 1287 |
| ಸದಸ್ಯರ ಹೆಸರು: | ಶ್ರೀಮತಿ ಬಲ್ಕೀಸ್ ಬಾನು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸ ಬೇಕಾದ ದಿನಾಂಕ : | 22.08.2025 |
| ಉತ್ತರಿಸುವವರು: | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ವಿಕಲಚೇತನರಿಗಾಗಿ ನಡೆಸುತ್ತಿರುವ ಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಿಂದ ವಿಕಲಚೇತನರಿಗಾಗಿ ನಡೆಸುತ್ತಿರುವ ಶಾಲೆಗಳ ಸಂಖ್ಯೆ:206. ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. |
| ಆ) | ಇಂತಹ ಶಾಲೆಗಳಲ್ಲಿ ಸಂಬಂಧಿಸಿದ ವಿಷಯದಲ್ಲಿ ಪರಿಣಿತಿ ಹೊಂದಿರುವ ಶಿಕ್ಷಕರನ್ನು ನೇಮಕ ಮಾಡಲಾಗಿದೆಯೇ; | ವಿಶೇಷ ಶಾಲೆಗಳಲ್ಲಿ ಸಂಬಂಧಿಸಿದ ವಿಷಯಗಳಲ್ಲಿ ಪರಿಣಿತಿ ಹೊಂದಿದ ಶಿಕ್ಷಕರನ್ನು ನಿಯಮಾನುಸಾರ ನೇಮಕ ಮಾಡಿಕೊಳ್ಳಲಾಗಿದೆ. |
| ಇ) | ಇಂತಹ ವಿಶೇಷ ಶಾಲೆಗಳಲ್ಲಿ ಶಿಕ್ಷಕರ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಈ) | ಬಂದಿದ್ದಲ್ಲಿ, ಕುಂದು ಕೊರತೆಗಳ ಪರಿಹಾರಕ್ಕಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು: (ವಿವರ ನೀಡುವುದು) | ಸರ್ಕಾರಿ ಶಾಲೆಗಳಲ್ಲಿ ಮತ್ತು 1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಸುತ್ತಿರುವ ವಿಶೇಷ ಶಾಲೆಗಳಲ್ಲಿ ವಿಶೇಷ ಶಿಕ್ಷಕರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅಂಗವಿಕಲ ಮಕ್ಕಳ ವಿಶೇಷ ಶೈಕ್ಷಣಿಕ ಯೋಜನೆಯಡಿ ಶಿಕ್ಷಕರಿಗೆ ನೀಡುತ್ತಿರುವ ಗೌರವಧನದಂತೆ 1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಸುತ್ತಿರುವ ವಿಶೇಷ ಶಾಲೆಗಳಲ್ಲಿ ವಿಶೇಷ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಕ್ರಮ ಪ್ರಕ್ರಿಯೆಯಲ್ಲಿದೆ.<br><br>ಸರ್ಕಾರಿ ಶಾಲೆಗಳಲ್ಲಿ ಕೊರತೆಯಿರುವ ವಿಶೇಷ ಶಿಕ್ಷಕರನ್ನು ಮಂಜೂರಾತಿ ನೀಡಿದ ಹುದ್ದೆಗಳ ಎದುರಾಗಿ ಅಂಶಕಾಲಿಕ ವೇತನದಡಿ ನೇಮಕ ಮಾಡಿಕೊಳ್ಳಲಾಗುತ್ತಿದೆ. |
| ಉ) | ವಿಕಲಚೇತನರಿಗಾಗಿ ಸರ್ಕಾರ ನೀಡುತ್ತಿರುವ ಸೌಲಭ್ಯಗಳಾವುವು? (ವಿವರ ನೀಡುವುದು) | ವಿಕಲಚೇತನರಿಗಾಗಿ ಸರ್ಕಾರ ನೀಡುತ್ತಿರುವ ಸೌಲಭ್ಯಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ. |

**ಸಂಖ್ಯೆ: ಮಮಇ 310 ಪಿಹೆಚ್‌ಪಿ 2025**

(ಲಕ್ಷ್ಮೀ ಆರ್. ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

ಅನುಬಂಧ-1

## ಇಲಾಖೆಯ ವತಿಯಿಂದ ನಡೆಯುತ್ತಿರುವ ವಿಶೇಷ ಶಾಲೆಗಳ ವಿವರ (ಅಂಧ ಹಾಗೂ ಶ್ರವಣದೋಷ)

| ಕ್ರ. ಸಂ. | ಜಿಲ್ಲೆಗಳ ವಿವರ | ಕ್ರ. ಸಂ. | ಶಾಲೆಗಳ ವಿಳಾಸ |
|---|---|---|---|
| 1 | ಬೆಂಗಳೂರು ನಗರ | 1 | ಅಧೀಕ್ಷಕರು, ಹಂಸಧ್ವನಿ ಸರ್ಕಾರಿ ವಸತಿಯುತ ಕಿವುಡು ಮತ್ತು ಮೂಕ ಮಕ್ಕಳ ಶಾಲೆ, ಇಂದಿರಾನಗರ, ಬೆಂಗಳೂರು |
| 2 | ಬೆಳಗಾವಿ | 2 | ಅಧೀಕ್ಷಕರ ಕಛೇರಿ, ಸರಕಾರಿ ಕಿವುಡ ಮಕ್ಕಳ ಶಾಲೆ ಬ್ಲಾಕ್ ಸಂ.338, ಶಿವಬಸವಯ್ಯನಗರ ಬೆಳಗಾವಿ |
| 3 | ಬಳ್ಳಾರಿ | 3 | ಅಧೀಕ್ಷಕರ ಕಛೇರಿ, ಸರಕಾರಿ ಕಿವುಡ ಮಕ್ಕಳ ಪಾಠಶಾಲೆ, ಸ್ತ್ರೀಸೇವಾನಿಕೇತನ ಆವರಣ, ಗಾಂಧಿನಗರ ಅಂಚೆ, ಬಳ್ಳಾರಿ |
| 4 | ಕಲಬುರಗಿ | 4 | ಅಧೀಕ್ಷಕರ ಕಛೇರಿ, ಕಿವುಡು ಮಕ್ಕಳ ಶಾಲೆ, ಆಳಂದ ಕಾಲೋನಿ ಕಲಬುರಗಿ |
| | | 5 | ಅಧೀಕ್ಷಕರ ಕಛೇರಿ, ಸರಕಾರಿ ಅಂಧ ಮಕ್ಕಳ ಶಾಲೆ ಸ್ಟೇಡಿಯಂ ಹತ್ತಿರ ಕಲಬುರಗಿ |
| 5 | ಮೈಸೂರು | 6 | ಅಧೀಕ್ಷಕರ ಕಛೇರಿ, ಕಿವುಡು ಮಕ್ಕಳ ಪಾಠಶಾಲೆ, ತಿಲಕ್ ನಗರ, ಮೈಸೂರು |
| | | 7 | ಅಧೀಕ್ಷಕರ ಕಛೇರಿ, ಅಂಧ ಮಕ್ಕಳ ಸರಕಾರಿ ಪಾಠಶಾಲೆ ತಿಲಕ್ ನಗರ, ಮೈಸೂರು |
| 6 | ದಾವಣಗೆರೆ | 8 | ಅಧೀಕ್ಷಕರ ಕಛೇರಿ, ಅಂಧ ಹೆಣ್ಣು ಮಕ್ಕಳ ಸರಕಾರಿ ಪಾಠಶಾಲೆ, ದೇವರಾಜ ಅರಸ್ ಬಡಾವಣೆ, ಬಿ. ಬ್ಲಾಕ್, 1ನೇ ಅಡ್ಡರಸ್ತೆ, ಶಿವಾಲಿ ಟಾಕೀಸ್ ಹತ್ತಿರ ದಾವಣಗೆರೆ |
| 7 | ಧಾರವಾಡ | 9 | ಅಧೀಕ್ಷಕರ ಕಛೇರಿ, ಸರಕಾರಿ ಅಂಧ ಮಕ್ಕಳ ಶಾಲೆ, ಸಿಧ್ದಾರೂಢ ಮಠ, ಹುಬ್ಬಳ್ಳಿ |

# 1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಯುತ್ತಿರುವ ಶಾಲೆಗಳು

| ಕ್ರ ಸಂ | ಜಿಲ್ಲೆಗಳ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು ಮತ್ತು ವಿಳಾಸ | ಪ್ರಸ್ತುತ ಯೋಜನೆ ನಡೆಯುತ್ತಿರುವ ವಿಳಾಸ |
|---|---|---|---|---|
| 1 | ಬೆಂಗಳೂರು ನಗರ | 1 | ಡೆಫ್ ಎಡ್ ಸೊಸೈಟಿ, ಶೀಲಾ ಕೊತ್ವಾಲ ಕಿವುಡು ಮಕ್ಕಳ ಶಾಲೆ, ರುಸ್ತುಂಭಾಗ್, ಮಣಿಪಾಲ್ ಆಸ್ಪತ್ರೆ ಹಿಂಭಾಗ, ಹೆಚ್ ಎ ಎಲ್ ರಸ್ತೆ, ಬೆಂಗಳೂರು-560017 | ಶೀಲಾ ಕೊತ್ವಾಲ ಕಿವುಡು ಮಕ್ಕಳ ಶಾಲೆ, ರುಸ್ತುಂಭಾಗ್, ಮಣಿಪಾಲ್ ಆಸ್ಪತ್ರೆ ಹಿಂಭಾಗ, ಹೆಚ್ ಎ ಎಲ್ ರಸ್ತೆ, ಬೆಂಗಳೂರು-560017 |
| | | 2 | ಭಾರತ್ ಸೊಸೈಟಿ, ಸೋಫಿಯಾ ಅಪರ್ಚುನಿಟಿ ಶಾಲೆ, ನಂ. 70, ಅರಮನೆ ರಸ್ತೆ, ಬೆಂಗಳೂರು-560001 | ಸೋಫಿಯಾ ಅಪರ್ಚುನಿಟಿ ಶಾಲ, ನಂ. 70, ಅರಮನೆ ರಸ್ತೆ, ಬೆಂಗಳೂರು-560001 |
| | | 3 | ನ್ಯಾಷನಲ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್, ಕರ್ನಾಟಕ ಶಾಖೆ, ಸಿ. ಎ. ಸೈಟ್ ನಂ-4, ಜೀವನ್‌ಭೀಮಾನಗರ, ಬೆಂಗಳೂರು-560075. | ತಾಂತ್ರಿಕ ತರಬೇತಿ ಕೇಂದ್ರ, ಸಿ. ಎ. ಸೈಟ್ ನಂ-4, ಜೀವನ್‌ಭೀಮಾನಗರ, ಬೆಂಗಳೂರು-560075. (ವಸತಿಯುತ). |
| | | 4 | ನ್ಯಾಷನಲ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್, ಕರ್ನಾಟಕ ಶಾಖೆ, ಸಿ. ಎ. ಸೈಟ್ ನಂ-4, ಜೀವನ್‌ಭೀಮಾನಗರ, ಬೆಂಗಳೂರು-560075. | ಚಲನವಲನ ತರಬೇತಿ ಕೇಂದ್ರ, ಸಿ. ಎ. ಸೈಟ್ ನಂ-4, ಜೀವನ್‌ಭೀಮಾನಗರ, ಬೆಂಗಳೂರು-560075. (ವಸತಿಯುತ). |
| | | 5 | ಬಾಲ ಮನೋ ವಿಕಾಸ ಕೇಂದ್ರ, ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆ, 98/1, ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು | ಬಾಲ ಮನೋ ವಿಕಾಸ ಕೇಂದ್ರ, ಬುದ್ಧಿಮಾಂದ್ಯ ಮಕ್ಕಳ ವಿಶೇಷ ಶಾಲೆ, 98/1, ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು |
| | | 6 | ದಿ ಮಾರ್ಥೋಮಾ ವೆಲ್ಫೇರ್ & ಎಜುಕೇಷನ್ ಸೊಸೈಟಿ, 11. ಪ್ರಿಮರಸ್ ರಸ್ತೆ, ಅಶೋಕನಗರ, ಬೆಂಗಳೂರು-560047 | ಮಾರ್ಥೋಮಾ ಅಪರ್ಚುನಿಟಿ ಸ್ಕೂಲ್, ಬೇತೆಲ್‌ನಗರ, ಬಸವನಪುರ, ಕೆ.ಆರ್. ಪುರಂ, ಬೆಂಗಳೂರು-36 |
| | | 7 | ಅಸೋಸಿಯೇಷನ್ ಫಾರ್ ದಿ ಮೆಂಟಲಿ ಚಾಲೆಂಜ್ಡ್, ಕಿದ್ವಾಯಿ ಆಸ್ಪತ್ರೆ ಹತ್ತಿರ, ಹೊಸೂರು ರಸ್ತೆ, ಬೆಂಗಳೂರು-560029 | ಅಸೋಸಿಯೇಷನ್ ಫಾರ್ ದಿ ಮೆಂಟಲಿ ಚಾಲೆಂಜ್ಡ್, ಕಿದ್ವಾಯಿ ಆಸ್ಪತ್ರೆ ಹತ್ತಿರ, ಹೊಸೂರು ರಸ್ತೆ, ಬೆಂಗಳೂರು-560029 |
| | | 8 | ದಿ ಅಸೋಸಿಯೇಷನ್ ಫಾರ್ ದಿ ಪೀಪಲ್ ವಿತ್ ಡಿಸೆಬಿಲಿಟಿ, ಹೆಣ್ಣೂರು ರಸ್ತೆ, ಲಿಂಗರಾಜಪುರಂ. ಬೆಂಗಳೂರು- | ದಿ ಅಸೋಸಿಯೇಷನ್ ಆಫ್ ದಿ ಪೀಪಲ್ ವಿತ್ ಡಿಸೆಬಿಲಿಟಿ, ಹೆಣ್ಣೂರು ರಸ್ತೆ, ಲಿಂಗರಾಜಪುರಂ, ಬೆಂಗಳೂರು. |

| ಕ್ರ ಸಂ | ಜಿಲ್ಲೆಗಳ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು ಮತ್ತು ವಿಳಾಸ | ಪ್ರಸ್ತುತ ಯೋಜನೆ ನಡೆಯುತ್ತಿರುವ ವಿಳಾಸ |
|---|---|---|---|---|
| | | 9 | ಮಾತೃಶ್ರೀ ಮನೋವಿಕಾಸ ಕೇಂದ್ರ, # 2/13, ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ, 2ನೇ ಕುಮಾರ ಪಾರ್ಕ್ ವೆಸ್ಟ್, ಶೇಶಾದ್ರಿಪುರಂ ಕಾಲೇಜು ಹತ್ತಿರ, ಬೆಂಗಳೂರು–560020 | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ, # 2/13, 2ನೇ ಕುಮಾರ ಪಾರ್ಕ್ ವೆಸ್ಟ್, ಶೇಶಾದ್ರಿಪುರಂ ಕಾಲೇಜು ಹತ್ತಿರ, ಬೆಂಗಳೂರು – 560020 |
| 2 | ದಕ್ಷಿಣ ಕನ್ನಡ | 10 | ಗಿಲ್ಡ್ ಆಫ್ ಸರ್ವಿಸ್ (ಸೇವಾ ಸಮಾಜ) ರಿ. ವಾಕ್ ಶ್ರವಣ ಕೇಂದ್ರ, "ಸೇವಾ ಮಂದಿರ"<br>ಪಾಂಡೇಶ್ವರ, ಮಂಗಳೂರು | ಗಿಲ್ಡ್ ಆಫ್ ಸರ್ವಿಸ್ (ಸೇವಾ ಸಮಾಜ) ರಿ. ವಾಕ್ ಶ್ರವಣ ಕೇಂದ್ರ, "ಸೇವಾ ಮಂದಿರ"<br>ಪಾಂಡೇಶ್ವರ, ಮಂಗಳೂರು |
| | | 11 | ಅಪೊಸ್ತಲಿಕ್ ಕಾರ್ಮೆಲ್ ಎಜುಕೇಶನಲ್ ಸೊಸೈಟಿ<br>ಸೈಂಟ್ ಆಗ್ನೇಸ್ ಸ್ಪೆಷಲ್ ಸ್ಕೂಲ್, ಮಂಗಳೂರು–575002 | ಸೈಂಟ್ ಆಗ್ನೇಸ್ ಸ್ಪೆಷಲ್ ಸ್ಕೂಲ್ ಬೈಂದೂರು, ಮಂಗಳೂರು–575 002 |
| 3 | ಚಿಕ್ಕಮಗಳೂರು | 12 | ಕರ್ನಾಟಕ ಅಂಧರ ಒಕ್ಕೂಟ (ನೊಂ) ಆಶಾಕಿರಣ ಅಂಧಮಕ್ಕಳ ವಸತಿಯುತ ಪಾಠಶಾಲೆ<br>ಕೆಂಪನಹಳ್ಳಿ, ಚಿಕ್ಕಮಗಳೂರು | ಆಶಾಕಿರಣ ಅಂಧಮಕ್ಕಳ ವಸತಿಯುತ ಪಾಠಶಾಲೆ,<br>ಕೆಂಪನಹಳ್ಳಿ,<br>ಚಿಕ್ಕಮಗಳೂರು– 577 101 |
| 4 | ಶಿವಮೊಗ್ಗ | 13 | ರೋಟರಿ 75ನೇ ವಾರ್ಷಿಕ ದತ್ತಿ ನಿಧಿ, ರೋಟರಿ ಕ್ಲಬ್,<br>ಶಿವಮೊಗ್ಗ. | ಆಶಾಕಿರಣ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ,<br>ವಿದ್ಯಾನಗರ<br>ಶಿವಮೊಗ್ಗ. |
| | | 14 | ಶಿವಭದ್ರ ಟ್ರಸ್ಟ್ (ರಿ), ಬಸವೇಶ್ವರ ನಗರ, ಜೈನ್ ಮಂದಿರ ಪಕ್ಕ,<br>ಶಿವಮೊಗ್ಗ | ತರಂಗ ಕಿವುಡು ಮಕ್ಕಳ ಶಾಲೆ,<br>ಬಸವೇಶ್ವರ ನಗರ,<br>ಜೈನ್ ಮಂದಿರ ಪಕ್ಕ, ಶಿವಮೊಗ್ಗ. |
| | | 15 | ಶ್ರೀ ಶಾರದಾದೇವಿ ಅಂಧರ ವಿಕಾಸ ಕೇಂದ್ರ, (ರಿ) ಅನುಪಿನ ಕಟ್ಟೆ ಗೋಪಾಳ, ಶಿವಮೊಗ್ಗ. | ಶ್ರೀ ಶಾರದಾದೇವಿ ಅಂಧ ಮಕ್ಕಳ ವಸತಿ ಶಾಲೆ, ಅನುಪಿನ ಕಟ್ಟೆ ಗೋಪಾಳ, ಶಿವಮೊಗ್ಗ. |
| | | 16 | ಶಿವಭದ್ರ ಟ್ರಸ್ಟ್ (ರಿ), ಬಸವೇಶ್ವರ ನಗರ, ಜೈನ್ ಮಂದಿರ ಪಕ್ಕ,<br>ಶಿವಮೊಗ್ಗ | ತರಂಗ ಕಿವುಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆ, ನ್ಯೂ ಟೌನ್,<br>ಭದ್ರಾವತಿ. |
| 5 | ಧಾರವಾಡ. | 17 | ಡಾ. ರೂಡಾಲ್ಪ ಸ್ಟೈನರ್ಸ್ ವೇಲ್ಫರ್ & ಎಜುಕೇಷನ್ ಸೊಸೈಟಿ, ಡಿ. ಸಿ. ಕಾಂಪೌಂಡ್. ಧಾರವಾಡ. | ಡಾ. ರೂಡಾಲ್ಪ ಸ್ಟೈನರ್ಸ್ ವೇಲ್ಫರ್ & ಎಜುಕೇಷನ್ ಸೊಸೈಟಿ,<br>ಬುದ್ಧಿಮಾಂದ್ಯ ಮಕ್ಕಳ ಶಾಲೆ, ಡಿ. ಸಿ. ಕಂಪೌಂಡ್.<br>ಧಾರವಾಡ. |

| ಕ್ರ ಸಂ | ಜಿಲ್ಲೆಗಳ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು ಮತ್ತು ವಿಳಾಸ | ಪ್ರಸ್ತುತ ಯೋಜನೆ ನಡೆಯುತ್ತಿರುವ ವಿಳಾಸ |
|---|---|---|---|---|
| | | 18 | ರೋಟರಿ ಇನ್ಸ್ಟಿಟ್ಯೂಟ್ ಫಾರ್ ರಿಹ್ಯಾಬಿಲಿಟೇಶನ್ ಆಫ್ ದ ಹ್ಯಾಂಡಿಕ್ಯಾಪ್ಡ್. ವಿವೇಕಾನಂದ ಕಾಲೋನಿ, ಭವಾನಿನಗರ, ಹುಬ್ಬಳ್ಳಿ-23. | ಡಾ. ಪಿ.ವಿ. ಧತ್ತಿ ರೋಟರಿ ಕಿವುಡ ಮಕ್ಕಳ ಶಾಲೆ, ವಿವೇಕಾನಂದ ಕಾಲೋನಿ, ಭವಾನಿನಗರ, ಹುಬ್ಬಳ್ಳಿ-23. |
| 6 | ಬೆಳಗಾವಿ | 19 | ಬೆಳಗಾವಿ ಜಿಲ್ಲಾ ಅಂಧ ಸೇವಾ ಸಂಸ್ಥೆ, ನೆಹರು ನಗರ, ಬೆಳಗಾವಿ-10 | ಮಾಹೇಶ್ವರಿ ಅಂಧ ಮಕ್ಕಳ ಶಾಲೆ, ರಾಮದೇವ್ ಹೊಟೆಲ್ ಹಿಂಭಾಗ, ನೆಹರು ನಗರ, ಬೆಳಗಾವಿ-10 |
| | | 20 | ಸಿದ್ದಾರ್ಥ ಶಿಕ್ಷಣ ಸಂಸ್ಥೆ. ಆರಾಧನಾ ಬುದ್ಧಿಮಾಂದ್ಯ ಮಕ್ಕಳ ಶಾಲೆ ಬಿ.ಸಿ ನಂ. 12 ಕೋಟೆ, ಬೆಳಗಾವಿ | ಸಿದ್ದಾರ್ಥ ಶಿಕ್ಷಣ ಸಂಸ್ಥೆ. ಆರಾಧನಾ ಬುದ್ಧಿಮಾಂದ್ಯ ಮಕ್ಕಳ ಶಾಲೆ ಬಿ.ಸಿ ನಂ. 12 ಕೋಟೆ, ಬೆಳಗಾವಿ |
| | | 21 | ಶ್ರೀ ಸಿದ್ಧಗಂಗಾ ಮಠ. ತುಮಕೂರು- 572 104. | ಶ್ರೀ ಸಿದ್ಧಗಂಗಾ ಅಂಧ ಮಕ್ಕಳ ವಸತಿಯುತ ಶಾಲೆ, ಶ್ರೀ ಸಿದ್ಧಗಂಗಾ ಮಠ, ತುಮಕೂರು- 572 104. |
| 7 | ತುಮಕೂರು | 22 | ಶ್ರೀ ಸಿದ್ಧಗಂಗಾ ಮಠ. ತುಮಕೂರು- 572 104. | ಕರ್ನಾಟಕ ನವಚೇತನ ಅಂಧ ಮಕ್ಕಳ ಶಾಲೆ, ಕುವೆಂಪುನಗರ, ಕುಣಿಗಲ್ ಟೌನ್, ಕುಣಿಗಲ್, ತುಮಕೂರು- ಜಿಲ್ಲೆ, - 572130. |
| | | 23 | ಬಾರತೀಯ ರೆಡ್‌ಕ್ರಾಸ್ ಸಂಸ್ಥೆ, ಅಶೋಕ ರಸ್ತೆ, ತುಮಕೂರ ಜಿಲ್ಲಾಶಾಖೆ, ತುಮಕೂರು- 572101 | ಬಾರತೀಯ ರೆಡ್‌ಕ್ರಾಸ್ ಸಂಸ್ಥೆ, ವಾಕ್ ಶ್ರವಣ ದೋಷವುಳ್ಳ ಮಕ್ಕಳ ವಸತಿಯುತ ಪಾಠಶಾಲೆ, ಬೆಳಗುಂಬ, ತುಮಕೂರು-572104 |
| 8 | ಹಾಸನ | 24 | ಕರ್ನಾಟಕ ಅಂಧರ ಒಕ್ಕೂಟ(ರಿ) ಸಾಲಗಾಮೆ ರೋಡ್, ಆಕಾಶವಾಣಿ ಹತ್ತಿರ, ಹಾಸನ | ಸಾಲಗಾಮೆ ರೋಡ್, ಆಕಾಶವಾಣಿ ಹತ್ತಿರ, ಹಾಸನ. (ವಸತಿಯುತ) |
| 9 | ಕೊಪ್ಪಳ | 25 | ಅಂಗವಿಕಲರ ಪುನಶ್ಚೇತನ ಸಂಸ್ಥೆ, ದಾಸನಾಳ, ಗಂಗಾವತಿ, ಕೊಪ್ಪಳ-ಜಿಲ್ಲೆ 583227 | ನಾದಬಿಂದು ಕಿವುಡು ಮಕ್ಕಳ ಶಾಲೆ. ದಾಸನಾಳ, ಗಂಗಾವತಿ, ಕೊಪ್ಪಳ-ಜಿಲ್ಲೆ 583227(ವಸತಿಯುತ) |
| 10 | ಹಾವೇರಿ | 26 | ಅರುಣೋದಯ ಬುದ್ಧಿಮಾಂದ್ಯ ಮಕ್ಕಳ ಶಾಲೆ, ಕೋಡಾ, ಹಿರೇಕೆರೂರ, ಹಾವೇರಿ ಜಿಲ್ಲೆ. | ಅರುಣೋದಯ ಬುದ್ಧಿಮಾಂದ್ಯ ಮಕ್ಕಳ ಶಾಲೆ, ಕೋಡಾ, ಹಿರೇಕೆರೂರ, ಹಾವೇರಿ ಜಿಲ್ಲೆ. |
| | | 27 | ಎಸ್.ಜೆ.ಎಮ್ ವಿದ್ಯಾಪೀಠ (ರಿ) ಚಿತ್ರದುರ್ಗ | ಎಸ್.ಜೆ.ಎಮ್ ದೈಹಿಕ ಅಂಗವಿಕಲರ ವಸತಿಯುತ ಪ್ರೌಢಶಾಲೆ, ಶ್ರೀ ಹೊಸಮಠ ಹಾವೇರಿ. |

| ಕ್ರ ಸಂ | ಜಿಲ್ಲೆಗಳ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು ಮತ್ತು ವಿಳಾಸ | ಪ್ರಸ್ತುತ ಯೋಜನೆ ನಡೆಯುತ್ತಿರುವ ವಿಳಾಸ |
|---|---|---|---|---|
| 11 | ಚಿತ್ರದುರ್ಗ | 28 | ತೀಕ್ಷ್ಣ ಅಂಧ ಮಕ್ಕಳ ವಸತಿಯುತ ಶಾಲೆ, ಮಾಳಪ್ಪನ ಹಟ್ಟಿ ಹತ್ತಿರ, ಭೀಮಸಮುದ್ರ ರಸ್ತೆ, ಚಿತ್ರದುರ್ಗ | ತೀಕ್ಷ್ಣ ಅಂಧ ಮಕ್ಕಳ ವಸತಿಯುತ ಶಾಲೆ, ಮಾಳಪ್ಪನ ಹಟ್ಟಿ ಹತ್ತಿರ, ಭೀಮಸಮುದ್ರ ರಸ್ತೆ, ಚಿತ್ರದುರ್ಗ |
| 12 | ಉಡುಪಿ | 29 | ಜೀವನ್ ವೆಲ್‌ಫೇರ್ ಟ್ರಸ್ಟ್, ಪೊಲೀಸ್ ಸ್ಟೇಷನ್ ಹತ್ತಿರ, ಕಾರ್ಕಳ, ಉಡುಪಿ ಜಿಲ್ಲೆ | ಜೀವನ್ ವೆಲ್‌ಫೇರ್ ಟ್ರಸ್ಟ್, ಪೊಲೀಸ್ ಸ್ಟೇಷನ್ ಹತ್ತಿರ, ಅರುಣೋದಯ ವಿಶೇಷ ಮಕ್ಕಳ ಶಾಲೆ. ಕಾರ್ಕಳ, ಉಡುಪಿ ಜಿಲ್ಲೆ |
| 13 | ಕಲಬುರ್ಗಿ | 30 | ಹೈದರಾಬಾದ್ ಕರ್ನಾಟಕ ಡಿಸೇಬಲ್ಡ್ ವೇಲ್ಫೆರ್ ಶಿಕ್ಷಣ ಸಂಸ್ಥೆ, 4-282, ಮಕಮ್‌ಪುರ್, ಕಲಬುರ್ಗಿ-585101 | ಅಂಬೂಬಾಯಿ ಅಂಧ ಹೆಣ್ಣು ಮಕ್ಕಳ ವಸತಿ ಶಾಲೆ. 4-282, ಮಕಮ್‌ಪುರ್, ಕಲಬುರ್ಗಿ - 585101 |
| | | 31 | ನ್ಯಾಷನಲ್ ಬಂಜಾರ ಶಿಕ್ಷಣ ಸಂಸ್ಥೆ, ಶಿವಶಕ್ತಿನಗರ, ಶ್ರೀ ಅಂಜನ ಕಿವುಡ ಮತ್ತು ಮೂಕ ಹೆಣ್ಣು ಮಕ್ಕಳ ಶಾಲೆ, ಕಲಬುರ್ಗಿ | ಅಂಜನ ಕಿವುಡ ಮತ್ತು ಮೂಕ ಹೆಣ್ಣು ಮಕ್ಕಳ ಶಾಲೆ, ಶಿವಶಕ್ತಿನಗರ, ಕಲಬುರ್ಗಿ |
| 14 | ವಿಜಯಪುರ | 32 | ಶ್ರೀ ಶಿವಶರಣ ಹರಳಯ್ಯ ವಿದ್ಯಾವರ್ಧಕ ಅಂಧರ ಸಂಸ್ಥೆ ಮಲ್ಲಿಕಾರ್ಜುನ ನಗರ ಬಿ.ಎಲ್.ಡಿ. ರೋಡ್ ವಿಜಯಪುರ | ಶ್ರೀ ಶಿವಶರಣ ಹರಳಯ್ಯ ವಿದ್ಯಾವರ್ಧಕ ಅಂಧ ಮಕ್ಕಳ ವಸತಿಯುತ ಪ್ರಾಥಮಿಕ ಶಾಲೆ ವಿಜಯಪುರ |
| 15 | ಮೈಸೂರು | 33 | ದಿ ನ್ಯಾಷನಲ್ ಅಸೋಸಿಯೇಶನ್ ಫಾರ್ ದಿ ಬ್ಲೈಂಡ್, (ಎನ್.ಎ.ಬಿ) ಕರ್ನಾಟಕ ಶಾಖೆ, ಸಿ. ಎ. ಸೈಟ್ ನಂ-4, ಜೀವನ್‌ಭೀಮಾನಗರ, ಬೆಂಗಳೂರು-560075 | ಅಂಧ & ಕಿವುಡು ಮಕ್ಕಳ ಕೈಗಾರಿಕೆ ತರಬೇತಿ ಕೇಂದ್ರ, ಸಿ-177/178, ಕೈಗಾರಿಕ ವಲಯ, ಯಾದವಗಿರಿ, ಮೈಸೂರು-20. |

ನಿರ್ದೇಶಕರು,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ,
ಬೆಂಗಳೂರು

ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯಡಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿರುವ

ವಿಶೇಷ ಶಾಲೆಗಳ ಪಟ್ಟಿ

| ಕ್ರ ಸಂ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು |
|---|---|---|---|---|
| 1 | ಬೆಂಗಳೂರು ನಗರ | 1 | ಸ್ನೇಹ ಭಾರತಿ ಶಿಕ್ಷಣ ಸಂಸ್ಥೆ ರಿ. ಸ್ನೇಹ ಬುದ್ಧಿ ವಿಕಲಚೇತನ ಮಕ್ಕಳ ವಸತಿಯುತ ಪಾಠಶಾಲೆ, ಬೆಸ್ತಮಾನ ಹಳ್ಳಿ, ಕಸಬಾ ಹೋಬಳಿ, ಹತ್ತಿಬೆಲೆ ರಸ್ತೆ, ಆನೇಕಲ್, ಬೆಂಗಳೂರು ನಗರ ಜಿಲ್ಲೆ | ಸ್ನೇಹ ಬುದ್ಧಿ ವಿಕಲಚೇತನ ಮಕ್ಕಳ ವಸತಿಯುತ ಶಾಲೆ ಆನೇಕಲ್ |
| | | 2 | ವಿದ್ಯಾರಣ್ಯ ರಿ, ಮಂಡೂರು, ವಿರ್ಗೋನಗರ ಮಾರ್ಗ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು-560003. | ಸ್ಫೂರ್ತಿ ಬುದ್ಧಿ ವಿಕಲಚೇತನ ಮಕ್ಕಳ ವಸತಿಯುತ ಶಾಲೆ ಮಂಡೂರು |
| | | 3 | ಜ್ಞಾನಜ್ಯೋತಿ ಅಂಗವಿಕಲರ ಪುನಶ್ಚೇತನ ಸಂಸ್ಥೆ(ರಿ), ಹೊಸಪೇಟೆ, ಹಕ್ಕಲು, ಹಳೇ ಸೊರಬ, ಶಿವಮೊಗ್ಗ ಜಿಲ್ಲೆ ಇವರು ಬೆಂಗಳೂರು ನಗರ ಜಿಲ್ಲೆಯಲ್ಲಿ ನಡೆಸುತ್ತಿರುವ ಬುದ್ಧಿಮಾಂದ್ಯ ಮಕ್ಕಳ ಶಾಲೆ ದೂ.ಸಂ.9448613652 | ಸ್ಫೂರ್ತಿ ಬುದ್ಧಿ ವಿಕಲಚೇತನ ಮಕ್ಕಳ ವಸತಿಯುತ ಶಾಲೆ ಮಂಡೂರು |
| | | 4 | ಸಮರ್ಥನಂ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್, # 11, ವಿಲ್ಲಾ ಸುಚಿತ, 1ನೇ ಅಡ್ಡರಸ್ತೆ, 17ನೇ ಎ ಮುಖ್ಯರಸ್ತೆ, 2ನೇ ಹಂತ, ಜೆ.ಪಿ.ನಗರ ಬೆಂಗಳೂರು ದೂ.ಸಂ: 25721444 9449864772/9448365929 | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ ಹೆಚ್.ಎಸ್.ಆರ್ ಬಡಾವಣೆ ಬೆಂಗಳೂರು mahantesh@samarthnam.org |
| | | 5 | ಡಾ.ಎಸ್.ಆರ್ ಚಂದ್ರಶೇಖರ್ ವಾಕ್ ಶ್ರವಣ, ಸಂಸ್ಥೆ, ಹೆಣ್ಣೂರು ಮುಖ್ಯರಸ್ತೆ, ಕರಿಯನಪಾಳ್ಯ, ಲಿಂಗರಾಜಪುರಂ, ಬೆಂಗಳೂರು-560084 ದೂ.ಸಂ: 25460405/25470037 | ಸುನಾದ ಕಿವುಡು ಮಕ್ಕಳ ಶಾಲೆ ಲಿಂಗರಾಜಪುರಂ ಬೆಂಗಳೂರು ishroot@gmail.com |
| | | 6 | ಶ್ರೀ ಶತಶೃಂಗ ವಿದ್ಯಾ ಸಂಸ್ಥೆ ರಿ, ಶ್ರೀ ಮೇಟಿಪಾಳ್ಯ, ತಾವರೆಕೆರೆ, ಮಾಗಡಿ ಮುಖ್ಯರಸ್ತೆ, ಬೆಂಗಳೂರು-562130 ಮೊ.ಸಂ.9141278067/9341155451 | ಶ್ರೀಶತಶೃಂಗ ಕಿವುಡು ಮಕ್ಕಳ ವಸತಿಯುತ ಶಾಲೆ ಬೆಂಗಳೂರು saissvs@gmail.com |
| | | 7 | ಕರ್ನಾಟಕ ಹ್ಯಾಂಡಿಕ್ಯಾಪ್ಟ್ ವೆಲ್ಫೇರ್ ಅಸೋಸಿಯೇಷನ್, ಸಿಎ-5&6, ಅಸೋಸಿಯೇಷನ್ ಆವರಣ, ಜೀವನ ಭೀಮಾ ನಗರ, ಬೆಂಗಳೂರು-560078 ದೂ.ಸಂ: 080-2566555/9945588228 | ನ್ಯಾಷನಲ್ ರೆಸಿಡೆನ್ಸಿಯಲ್ ಸ್ಕೂಲ್ ಫಾರ್ ದಿ ಡೆಫ್ ಬೆಂಗಳೂರು platillem.khwab@gmail.com |
| | | 8 | ವಿಜಯನಗರ ಡಿಸೇಬಲ್ಡ್ ಅಸೋಸಿಯೇಷನ್, 9 ನೇ ಮುಖ್ಯ ರಸ್ತೆ, ವಿಶ್ವಕರ್ಮ ದೇವಸ್ಥಾನದ ಹತ್ತಿರ, ಹಂಪಿನಗರ, ವಿಜಯನಗರ 2 ಹಂತ, ಆರ್.ಪಿ.ಸಿ. ಬಡಾವಣೆ, ಬೆಂಗಳೂರು. ದೂ.ಸಂ.23142654/23118866 | ಬುದ್ಧಿವಿಕಲಚೇತನ ಮಕ್ಕಳ ವಸತಿರಹಿತ ಶಾಲೆ vikasaspecialschool1992@gmail.com |
| | | 9 | ಹಿಂದೂ ಸೇವಾ ಪ್ರತಿಷ್ಠಾನ, ನಂ.56, 11ನೇ ಮೇನ್, 14ನೇ ಎ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-53 ದೂ.ಸಂ.080-23312908 | ಅರುಣಚೇತನ ಸ್ಕೂಲ್ ಫಾರ್ ದಿ ಸ್ಪಾಸ್ಟಿಕ್ ಮಲ್ಟಿಪಲ್ ಡಿಸೇಬಲ್ಡ್ ವಸತಿರಹಿತ ಶಾಲೆ www.arunachetana.org |
| | | 10 | ಗೆರಿಜಂ ರಿಹ್ಯಾಬಿಲಿಟೇಷನ್ ಟ್ರಸ್ಟ್ (ರಿ), ನಂ. 24, 24 ನೇ ಡಿ ಕ್ರಾಸ್, ಈಜಿಪುರ, ವಿವೇಕನಗರ ಅಂಚೆ, ಬೆಂಗಳೂರು. ದೂ.ಸಂ.080-25712015/25713201 | ಗೇರಿಜಂ ಇಂಟಿಗ್ರೇಟೆಡ್ ಹೋಂ ಅಂಡ್ ಸ್ಕೂಲ್ ಫಾರ್ ದಿ ಹ್ಯಾಂಡಿಕ್ಯಾಪ್ಟ್ gerizim@bgl.vslnet.in |

| ಕ್ರ ಸಂ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು |
|---|---|---|---|---|
| | | 11 | ಕರ್ನಾಟಕ ವೆಲ್ಫೇರ್ ಅಸೋಷಿಯೇಷನ್ ಫಾರ್ ದಿ ಬ್ಲೈಂಡ್, ಓರಿಯಂಟೇಷನ್ ಅಂಡ್ ಮೊಬಿಲಿಟಿ ಟ್ರೈನಿಂಗ್ ಸೆಂಟರ್, ನಂ.69, ಸುಬೇದಾರ್ ಛತ್ರಂ ರೋಡ್, ನೆಹರುನಗರ, ಬೆಂಗಳೂರುದೂ.ಸಂ.23369703/9741122706 | ಕರ್ನಾಟಕ ವೆಲ್ಫೇರ್ ಅಸೋಷಿಯೇಷನ್ ಫಾರ್ ದಿ ಬ್ಲೈಂಡ್ ವಸತಿಯುತ ಶಾಲೆ kwab.ngo@gmail.com |
| | | 12 | ಕೃಷ್ಣ ಟ್ರಸ್ಟ್ ರಿ, ಹಳೇಬೈರೂಹಳ್ಳಿ, ಕೆಂಗೇರಿ, ಬೆಂಗಳೂರು ದಕ್ಷಿಣ ತಾ॥, ಬೆಂಗಳೂರು ಮೊ.ಸಂ:9844045744 | ಕೃಷ್ಣ ಚೈತನ್ಯ ಬುದ್ದಿಮಾಂದ್ಯ ಮಕ್ಕಳ ವಸತಿಶಾಲೆ ಬೆಂಗಳೂರು sadashiv.co@gmail.com |
| | | 13 | ಎಸ್.ಜಿ.ಎಸ್. ವಾಗ್ದೇವಿ ಸಂಪರ್ಕ ನ್ಯೂನತೆಯುಳ್ಳವರ ಪುನಃಶ್ಚೇತನ ಕೇಂದ್ರ, 3ನೇ ಸಿ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಗಿರಿನಗರ, 2ನೇ ಹಂತ, ಬೆಂಗಳೂರು-560085. ದೂ.ಸಂ: 26727141 080-65593266 | ಎಸ್.ಜಿ.ಎಸ್. ವಾಗ್ದೇವಿ ವಾಕ್ ಶ್ರವಣದೋಷವುಳ್ಳ ಮಕ್ಕಳ ವಸತಿರಹಿತ ಶಾಲೆ ಗಿರಿನಗರ ಬೆಂಗಳೂರು www.sgsvagdevi.org |
| | | 14 | ಸ್ಪಾಸ್ಟಿಕ್ ಸೊಸೈಟಿ ಆಫ್ ಕರ್ನಾಟಕ, ನಂ.31, 5ನೇ ಕ್ರಾಸ್, 5ನೇ ಮೇನ್, 1ನೇ ಹಂತ, ಇಂದಿರಾನಗರ, ಬೆಂಗಳೂರು-38 ದೂ.ಸಂ.40745900/01/02 | ಬುದ್ಧಿಮಾಂದ್ಯ/ಬಹುವಿಧ ವಿಕಲತೆಯುಳ್ಳ ಮಕ್ಕಳ ವಸತಿರಹಿತ ಶಾಲೆ spasticsocietyofkarnataka@gmail.com office@spasticsocietyofkarnataka.org |
| | | 15 | ಸೃಷ್ಠಿ ಸ್ಪೆಷಲ್ ಅಕಾಡೆಮಿ ರಿ, ನಂ.20, ಜಟ್ಟಿಪಾಳ್ಯ, ಚನ್ನೇನಹಳ್ಳಿ, 20ನೇ ಮೈಲಿ, ಮಾಗಡಿ ರಸ್ತೆ, ಬೆಂಗಳೂರು ದೂ.ಸಂ:23180318/0186-28430504 | ಸೃಷ್ಠಿ ಬುದ್ಧಿಮಾಂದ್ಯ ವಸತಿರಹಿತ ಶಾಲೆ shristiblr@gmail.com |
| | | 16 | ವಿನಾಯಕ ಎಜುಕೇಷನ್, ನಂ.899, 15ನೇ ಅಡ್ಡರಸ್ತೆ, 1ನೇ ಹಂತ, 1ನೇ ಘಟಕ, ಚಂದ್ರಬಡಾವಣೆ, ಬೆಂಗಳೂರು-560040 | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ sves2001@gmail.com |
| | | 17 | ಆಶಾಚಾರಿಟೇಬಲ್ ಟ್ರಸ್ಟ್, ಬೆಂಗಳೂರು ಎಲ್-76/ಎ, ಹೆಚ್.ಬಿ.ಸಿಎಸ್. ಕಿರ್ಲೋಸ್ಕರ್ ಕಾಲೋನಿ, 3 ನೇ ಕ್ರಾಸ್, 4 ನೇ ಬ್ಲಾಕ್, ಬಸವೇಶ್ವರ ನಗರ, ಬೆಂಗಳೂರು ದೂ.ಸಂ: 080-23225279 | ಆಶಾ ಆಟಿಸಂ ವಸತಿರಹಿತ ಶಾಲೆ www.ashaforautism.com |
| | | 18 | ದೀಪಾ ಅಕಾಡೆಮಿ ಫಾರ್ ದಿ ಡಿಫರೆಂಟ್ಲಿ ಏಬಲ್ಡ್, ನ. 226/ಎ/3, ಟ್ಯಾಂಕ್ ಬಂಡ್ ರಸ್ತೆ, ಸುಬ್ರಮಣ್ಯನಗರ, ಬೆಂಗಳೂರು. ದೂ.ಸಂ:9900918111, 9980368431 & 080-23471268 | ದೀಪಾ ಅಂಧ ಹೆಣ್ಣು ಮಕ್ಕಳ ವಸತಿಯುತ ಶಾಲೆ deepa.academy@gmail.com |
| | | 19 | ವೆಲ್ಫೇರ್ ಅಸೋಸಿಯೇಷನ್ ಫಾರ್ ದಿ ರಿಹ್ಯಾಬಿಲಿಟೇಷನ್ ಆಫ್ ಡಿಸೇಬಲ್ಡ್ ಅಂಡ್ ಸೊಸೈಟಿ (ರಿ), ಸಿ.ಎ. ನಿವೇಶನ, ಹಾಪ್‌ಕಾಮ್ಸ್ ಹತ್ತಿರ, 10 ನೇ ಮುಖ್ಯ ರಸ್ತೆ, ಜೀವನಭೀಮಾನಗರ, ಬೆಂಗಳೂರು. ದೂ.ಸಂ.: 080-25260285, 9009571127 | ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ info@wardsbengaluru.org |
| | | 20 | ಧರಿತ್ರಿ ಟ್ರಸ್ಟ್ (ರಿ), ಅಜಿತ ಮನೋಚೇತನ ಪೀಣ್ಯ ರೋಟರಿ ಉದ್ಯೋಗಭವನ, # 463 ಡಿ, 13ನೇ ಅಡ್ಡರಸ್ತೆ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು-560058. ದೂ.ಸಂ.:94483553888/23567518 | ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ info@darithree.org |

| ಕ್ರ ಸಂ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು |
|---|---|---|---|---|
| | | 21 | ಸಾಯಿಚೈತನ್ಯ ಚಾರಿಟೇಬಲ್ ಟ್ರಸ್ಟ್, ನಂ.27/1, 12ನೇ ಕ್ರಾಸ್, (ಸಿದ್ಧಶ್ರೀ ಧಾಮದ ಹತ್ತಿರ), ರಾಮಗೊಂಡನಹಳ್ಳಿ, ಅನಂತಪುರ, ಯಲಹಂಕ, ಬೆಂಗಳೂರು ನಗರ ದೂ.ಸಂ. 9449637126 | ಬೆಳಕು ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ |
| | | 22 | ಕರ್ನಾಟಕ ವೆಲ್ಫೇರ್ ಅಸೋಸಿಯೇಷನ್ ಫಾರ್ ದಿ ಡೆಫ್ (ರಿ), ನಂ. 171, 4 ನೇ ಡಿ ಮುಖ್ಯ ರಸ್ತೆ, 30 ಅಡಿ ರಸ್ತೆ, ಮಹಾಲಕ್ಷ್ಮಿ ಮುಂದುರೆದ ಬಡಾವಣೆ, ಬೆಂಗಳೂರು. ದೂ.ಸಂ.9902231002 | ಶಾಸ್ತ್ರಿ ಕಿವುಡು ಮಕ್ಕಳ ವಸತಿಯುತ ಶಾಲೆ |
| | | 23 | ದಿ ಅಸೋಸಿಯೇಷನ್ ಪೀಪಲ್ ವಿತ್ ಡಿಸೇಬಿಲಿಟಿ, (ಎಪಿಡಿ), 6ನೇ ಅಡ್ಡರಸ್ತೆ, ಹೆಚಿನ್ಸ್ ರೋಡ್, ಹೆಣ್ಣೂರು ಮುಖ್ಯರಸ್ತೆ ಎದುರುಗಡೆ, ಲಿಂಗರಾಜಪುರಂ, ಸೆಂಟ್ ಥಾಮಸ್ ಟೌನ್ ಪೋಸ್ಟ್, ಬೆಂಗಳೂರು-84 | (ಶ್ರದ್ಧಾಂಜಲಿ ಸಮನ್ವಯ ಶಾಲೆ) apdbasavaraj@gmail.com ದೂ.ಸಂ: 25415165/25489594 9444869430 |
| | | 24 | ಎಫ್.ಎಂ.ಆರ್.ಇಂಡಿಯಾ ಆಶಾನಿಕೇತನ ಸಂಸ್ಥೆ, ಬೆಂಗಳೂರು ಕೋರಮಂಗಲ, ಬೆಂಗಳೂರು | ಬುದ್ಧಿಮಾಂದ್ಯ ವ್ಯಕ್ತಿಗಳ ತರಬೇತಿ ಕೇಂದ್ರ |
| | | 25 | ಜ್ಯೋತಿ ಸೇವಾ ಸೊಸೈಟಿ, ಬೆಂಗಳೂರು ಇವರು ವೆಂಕಟೇಶಪುರ, ಬೆಂಗಳೂರು ನಗರ ಜಿಲ್ಲೆ | ಜ್ಯೋತಿ ಸೇವಾ ಅಂಧ ಮಕ್ಕಳ ವಿಶೇಷ ಶಾಲೆ |
| | | 26 | ಸ್ಪಾಸ್ಟಿಕ್ ಸೊಸೈಟಿ ಆಫ್ ಕರ್ನಾಟಕ, ನಂ.31, 5ನೇ ಕ್ರಾಸ್, 5ನೇ ಮೇನ್, 1ನೇ ಹಂತ, ಇಂದಿರಾನಗರ, ಬೆಂಗಳೂರು-38 ದೂ.ಸಂ.40745900/01/02 | ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ spasticsocietyofkarnataka@gmail.com office@spasticsocietyofkarnataka.org |
| | | 27 | ನವೋದಯ ಎಜುಕೇಷನ್ ಟ್ರಸ್ಟ್(ರಿ), ನಾಗರಬಾವಿ, ಬೆಂಗಳೂರು | ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರತೆರನಾದ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರ |
| | | 28 | ಅಲ್ಪಾ ಲಿವಿಂಗ್ ಫಾರ್ ಆಟಿಸಂ ಅಡಲ್ಟ್ (ರ), ಬೆಂಗಳೂರು | ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರತೆರನಾದ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರ |
| | | 29 | ಶತಶೃಂಗ ವಿದ್ಯಾ ಸಂಸ್ಥೇ (ರಿ), ಬೆಂಗಳೂರು ನಂ.14, ಕೆಂಪೇಗೌಡ ಲೇಔಟ್, ಸಾಯಿಬಾಬಾ, ಮಂದಿರ ಸಮೀಪ, ಬೆಂಗಳೂರು | ಶ್ರೀ ಸಾಯಿ ಮಾನಸ ಗುರುಕುಲ ವಸತಿ ರಹಿತ ಶಾಲೆ |
| 2 | ಬೆಂಗಳೂರು ಗ್ರಾ | 30 | ಸರ್ವೋದಯ ಸರ್ವೀಸ್ ಸೊಸೈಟಿ ರಿ, ಶಿಡ್ಲಘಟ್ಟ ರಸ್ತೆ, ಚಂದೇನಹಳ್ಳಿ ಗೇಟ್, ವಿಜಯಪುರ, ದೇವನಹಳ್ಳಿ ತಾ॥, ಬೆಂಗಳೂರು ಗ್ರಾ ಜಿಲ್ಲೆ-563125 ದೂ.ಸಂ: 080-27667047 | ಲೈಫ್ ಲೈಟ್ ಬುದ್ಧಿವಿಕಲಚೇತನ ಮಕ್ಕಳ ವಸತಿಯುತ ಪಾಠಶಾಲೆ, ಶಿಡ್ಲಘಟ್ಟ ರಸ್ತೆ, ಚಂದೇನಹಳ್ಳಿ ಗೇಟ್, ವಿಜಯಪುರ, ದೇವನಹಳ್ಳಿ ತಾ॥, ಬೆಂಗಳೂರು ಗ್ರಾ ಜಿಲ್ಲೆ. |
| | | 31 | ಧರಿತ್ರಿ ಟ್ರಸ್ಟ್ (ರಿ), ನರಸೀಪುರ, ನೆಲಮಂಗಲ ತಾ॥, ಬೆಂಗಳೂರು ಗ್ರಾ ಜಿಲ್ಲೆ (ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ) :94483553888/23567518 | ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ |

| ಕ್ರ ಸಂ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು |
|---|---|---|---|---|
| 3 | ಕೋಲಾರ | 32 | ನಂದಾದೀಪ ಅಂಗವಿಕಲರ ಶಿಕ್ಷಣ ಮತ್ತು ಪುನಃಶ್ಚೇತನ ಸಂಸ್ಥೆ ರಿ. ವೈಟ್ ಗಾರ್ಡನ್, ಅರಳೇರಿ ರಸ್ತೆ, ಮಾಲೂರು-563130 ಕೋಲಾರ ಜಿಲ್ಲೆ ದೂ.ಸಂ. 9448613652 | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ ಮಾಲೂರು ಕೋಲಾರ ಜಿಲ್ಲೆ apporaoms@gmail.com |
| | | 33 | ಶ್ರೀ ವಾದಿರಾಜ ಟ್ರಸ್ಟ್ (ರಿ), # 994, 1ನೇ ಮುಖ್ಯರಸ್ತೆ, ಕೋಟೆ, ಕೋಲಾರ-563101 | ಶಾರದ ನವಜೀವನ ವಿದ್ಯಾಮಂದಿರ ಬುದ್ಧಿವಿಕಲಚೇತನ ಮಕ್ಕಳ ಶಾಲೆ, # 994, 1ನೇ ಮುಖ್ಯರಸ್ತೆ, ಕೋಟೆ, ಕೋಲಾರ-563101 |
| | | 34 | ಶ್ರೀ ಶತಶೃಂಗ ವಿದ್ಯಾ ಸಂಸ್ಥೆ ರಿ ಬೆಂಗಳೂರು | ಶ್ರೀ ಸಾಯಿ ಶತಶೃಂಗ ಕಿವುಡು ಮಕ್ಕಳ ವಸತಿಯುತ ಶಾಲೆ ಬಂಗಾರಪೇಟೆ ಕೋಲಾರ |
| | | 35 | ಸಾರ್ಕ್ ಸಂಸ್ಥೆ (ರಿ), ಸರ್ವೀಸ್ ಫಾರ್ ಏಜೆನ್ಸಿ ರೂರಲ್ ವುಮೆನ್ & ಚಿಲ್ಡ್ರನ್, ಕೊತ್ತಮಂಗಲ ರಸ್ತೆ, ಕಾಂತರಾಜವೃತ್ತ, ಕೊತ್ತ ಮಂಗಲ (ಪೋ), ಮುಳಬಾಗಿಲು ತಾ॥, ಕೋಲಾರ ಜಿಲ್ಲೆ, ದೂ.ಸಂ.8722231685 | ಆಶಾಕಿರಣ ಇನ್ಸಿಟ್ಯೂಟ್ ಆಫ್ ಮೆಂಟಲಿ ಹ್ಯಾಂಡಿಕ್ಯಾಪ್ಡ್ ಸ್ಕೂಲ್, ಕೊತ್ತಮಂಗಲ ರಸ್ತೆ, ಕಾಂತರಾಜವೃತ್ತ, ಕೊತ್ತ ಮಂಗಲ (ಪೋ), ಮುಳಬಾಗಿಲು ತಾ॥, ಕೋಲಾರ ಜಿಲ್ಲೆ, ದೂ.ಸಂ.9448664304, 9141557373, 9141643357 e-mail sarwcngo@gmail.com |
| | | 36 | ಅಂಗರಗಂಗೆ ವಿದ್ಯಾಸಂಸ್ಥೆ (ರಿ), ನಂ.15, ಅಂತರಗಂಗೆ ರಸ್ತೆ, ಕೀಲುಕೋಟೆ, ಕೋಲಾರ | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ, ನಂ.15, ಅಂತರಗಂಗೆ ರಸ್ತೆ, ಕೀಲುಕೋಟೆ, ಕೋಲಾರ |
| 4 | ಶಿವಮೊಗ್ಗ | 37 | ನವಚೇತನ ಬುದ್ಧಿಮಾಂದ್ಯ ಮಕ್ಕಳ ಕ್ಷೇಮಾಭಿವೃದ್ಧಿ ಸಂಸ್ಥೆ, ಕೆ.ಇ.ಬಿ.ಕಾಲೋನಿ, ಸೊರಬ-577439, ಶಿವಮೊಗ್ಗ ಜಿಲ್ಲೆ ಮೊ.ಸಂ: 9449159963/ 948246644 | ನವಚೇತನ ಬುದ್ಧಿಮಾಂದ್ಯ ಮಕ್ಕಳ ವಸತಿ ಯುತ ಶಾಲೆ, ಹೊಸಪೇಟೆ ಹಕ್ಕಲು, ಹಳೇ ಸೊರಬ (ತಾ), ಶಿವಮೊಗ್ಗ ಜಿಲ್ಲೆ-577429 |
| | | 38 | ಶಾಂತಿನಿಕೇತನ ಚಾರಿಟೇಬಲ್ ಟ್ರಸ್ಟ್ ರಿ ಶಿವಮೊಗ್ಗ ದೂ.ಸಂ. 9741338315 | ಮದರ್ ಥೇರಸಾ ಕಿವುಡು ಮತ್ತು ಮೂಕ ಮಕ್ಕಳ ವಸತಿಶಾಲೆ |
| | | 39 | ಚೈತನ್ಯ ವಿಶೇಷ ಶಿಕ್ಷಣ ಟ್ರಸ್ಟ್(ರಿ), ಶಿವಮೊಗ್ಗ ಜಿಲ್ಲೆ ಇವರು ಮುಂಗರವಳ್ಳಿ, ಭೀಮನ ಕೋಣೆ ಅಂಚೆ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ |
| 5 | ತುಮಕೂರು | 40 | ಸ್ವದೇಶಿ ಮಹಿಳಾ ಮಂಡಳಿ ರಿ ಮೊಳಕಾಲ್ಮೂರು ಚಿತ್ರದುರ್ಗ | ಜ್ಞಾನಭಾರತಿ ವಾಕ್ ಮತ್ತು ಶ್ರವಣದೋಷವುಳ್ಳ ಮಕ್ಕಳ ವಸತಿಯುತ ಶಾಲೆ ಮಧುಗಿರಿ ತುಮಕೂರು ಜಿಲ್ಲೆ |
| | | 41 | ಎಂ.ಜಿ ಎಜುಕೇಷನ್ ಸೊಸೈಟಿ ರಿ ತುಮಕೂರು ಮೊ.ಸಂ.9632557310 | ಸ್ಪಂದನ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ ತುಮಕೂರು |
| | | 42 | ಬುದ್ಧಿಮಾಂದ್ಯ ಮಕ್ಕಳ ಪಾಲಕರ ಸಂಘ ರಿ ಕೆಆರ್‌ಜಿ.ಎಂ.ಎಸ್ ತುಮಕೂರು | ಮಾನಸ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ ತುಮಕೂರು |
| | | 43 | ಯಶಸ್ವಿನಿ ಎಜುಕೇಷನ್ ಸೊಸೈಟಿ(ರಿ) ತುಮಕೂರು, ಇವರು ಹಾಲುಗೊಣ ಮಜರೆ, ಬಿ ಪಾಳ್ಯ, ಚಿಕ್ಕನಾಯಕನಹಳ್ಳಿ ತಾಲ್ಲುಕು, ತುಮಕೂರು ಜಿಲ್ಲೆ | |
| 6 | ರಾಮನಗರ | 44 | ಶ್ರೀ ಆದಿ ಚುಂಚನಗಿರಿ ಶಿಕ್ಷಣ ಟ್ರಸ್ಟ್ ರಿ, ಅರಚಕರಹಳ್ಳಿ, ಬಿ.ಎಂ.ರೋಡ್, ನಾಗಮಂಗಲ ಮಂಡ್ಯ ಜಿಲ್ಲೆ ದೂ.ಸಂ: 27201090 jsbsfb@gmail.com ಮೊ.ಸಂ.9740222169 | ಶ್ರೀ ಬಾಲಗಂಗಾಧರ ನಾಥಸ್ವಾಮಿ ಅಂಧರ ವಸತಿಯುತ ಶಾಲೆ ಅರ್ಚಕರಹಳ್ಳಿ ರಾಮನಗರ |

| ಕ್ರ ಸಂ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು |
|---|---|---|---|---|
| 7 | ಚಿಕ್ಕಬಳ್ಳಾಪುರ | 45 | ಆಶಾಕಿರಣ ಶಿಕ್ಷಣ ಮತ್ತು ಪುನಶ್ಚೇತನ ಸಂಸ್ಥೆ, ಶಿಡ್ಲಘಟ್ಟ ಚಿಕ್ಕಬಳ್ಳಾಪುರ (ಎಂಆರ್) | ಆಶಾಕಿರಣ ಅಂಧ ಮಕ್ಕಳ ವಸತಿಶಾಲೆ |
| | | 46 | ಆಶಾಕಿರಣ ಶಿಕ್ಷಣ ಮತ್ತು ಪುನಶ್ಚೇತನ ಸಂಸ್ಥೆ, ಹೆಲ್ತ ಕಾಲೋನಿ, ಅಂಚೆ ಕಛೇರಿ ರಸ್ತೆ, ಶಿಡ್ಲಘಟ್ಟ ಟೌನ್, ನೆಲ್ಲಿಮರದಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ ದೂ.ಸಂ: 08158–255600 | ಆಶಾಕಿರಣ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ ಆಣೂರು, ತಿಪ್ಪೇನಹಳ್ಳಿ ಅಂಚೆ, ಶಿಡ್ಲಘಟ್ಟ ತಾ॥. ಚಿಕ್ಕಬಳ್ಳಾಪುರ |
| 8 | ಚಿತ್ರದುರ್ಗ | 47 | ಅಸೋಸಿಯೇಷನ್ ಫಾರ್ ದಿ ಡೆಫ್ ಅಜಿಡ್ ಡಂಬ್(ರಿ), ಕಿವುಡು ಮೂಗರ ಸಂಘಟನೆ ರಿ, ರಾಜೀವ್‌ನಗರ, ನಾಯಕನಹಟ್ಟಿ ರೋಡ್, ಚಳ್ಳಕೆರೆ ತಾ॥, ಚಿತ್ರದುರ್ಗ | ಬೆಳಕು ಕಿವುಡು ಮೂಗರ ಮಕ್ಕಳ ವಸತಿಯುತ ಶಾಲೆ, ರಾಜೀವನಗರ, ನಾಯಕನಹಟ್ಟಿ ರೋಡ್, ಚಳ್ಳಕೆರೆ (ತಾ), ಚಿತ್ರದುರ್ಗ (ಜಿ) |
| | | 48 | ಸಿದ್ದೇಶ್ವರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ರಿ), ಹಿರಿಯೂರು ತಾ॥, ಚಿತ್ರದುರ್ಗ ಜಿಲ್ಲೆ | ಸಿದ್ದೇಶ್ವರ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ವಿಶೇಷ ಶಾಲೆ |
| 9 | ದಾವಣಗೆರೆ | 49 | ಶ್ರೀ ವಿನಾಯಕ ಎಜುಕೇಷನ್ ಸೊಸೈಟಿ ರಿ. # 298/46, ಡಿಸಿಎಂ ಟೌನ್‌ಶಿಫ್, ಪಿ.ಬಿ.ರೋಡ್, ದಾವಣಗೆರೆ ಜಿಲ್ಲೆ ದೂ.ಸಂ: 08192–235819 smdeafschool@rediffmail,com | ಶ್ರೀ ಮೌನೇಶ್ವರಿ ಕಿವುಡು ಮತ್ತು ಮೂಕ ಮಕ್ಕಳ ವಸತಿಯುತ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆ, ದಾವಣಗೆರೆ |
| | | 50 | ಶ್ರೀ ವಿನಾಯಕ ಎಜುಕೇಷನ್ ಸೊಸೈಟಿ ರಿ. ದಾವಣಗೆರೆ (ಪ್ರೌಢಶಾಲೆ) | ಶ್ರೀ ಮೌನೇಶ್ವರಿ ಕಿವುಡು ಮತ್ತು ಮೂಕ ಮಕ್ಕಳ ವಸತಿಯುತ ಶಾಲೆ ದಾವಣಗೆರೆ |
| | | 51 | ಅಂಗವಿಕಲರ ಆಶಾಕಿರಣ ಟ್ರಸ್ಟ್ ರಿ, ಲಕ್ಷ್ಮೀ ಫ್ಲೋರ್ ಮಿಲ್ಸ್ ಹಿಂಭಾಗ, ಎಸ್.ಎಸ್.ಲೇಔಟ್, "ಎ" ಬ್ಲಾಕ್, ಶಾಮನೂರ್ ರೋಡ್, ದಾವಣಗೆರೆ–577004 ದೂ.ಸಂ: 08192–222822 ashakiranadvg@gmail.com | ಭಾವೈಕ್ಯತಾ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ ದಾವಣಗೆರೆ |
| | | 52 | ಶ್ರೀ ಜಗಜ್ಯೋತಿ ಬಸವೇಶ್ವರ ವಿದ್ಯಾಸಂಸ್ಥೆ (ರಿ), ಹರಿಹರ, ದಾವಣಗೆರೆ | ಶ್ರೀ ಮರುಳ ಸಿದ್ದೇಶ್ವರ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ವಿಶೇಷ ಶಾಲೆ |
| | | 53 | ಸೇವಾನಿಕೇತನ ಅಸೋಸಿಯೇಷನ್ ಫಾರ್ ಡಿಸೇಬಲ್ಡ್ (ರಿ) ದಾವಣಗೆರೆ ಜಿಲ್ಲೆ. | ಶ್ರವಣ ದೋಷ ವಸತಿಯುತ ಶಾಲೆ |
| 10 | ಬೆಳಗಾಂ | 54 | ಭಾರತೀಯ ಗ್ರಾಮೀಣ ಶಿಕ್ಷಣ ಪ್ರಸಾರಕ ಸಂಘ ರಿ. ಮನವಳ್ಳಿ, ಸವದತ್ತಿ ತಾ॥, ಬೆಳಗಾವಿ ಜಿಲ್ಲೆ ಮೊ.ಸಂ. 9880114728 | ಶ್ರೀ ವಿಪಿ ಜೆವೂರ್ ಸ್ಮಾರಕ ಕಿವುಡ ಮಕ್ಕಳ ಶಾಲೆ ಬೆಳಗಾವಿ dyiambagi@gmail.com |
| | | 55 | ದಿ ಅಪಾಸ್ಟೋಲಿಕ್ ಕಾರ್ಮಲ್ ಎಜುಕೇಷನ್ ಸೊಸೈಟಿ (ರಿ), ಸೆಂಟ್ ಆನ್ಸ್ ಕಾನ್ವೆಂಟ್, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ. | ಕಾರ್ಮೆಲ್ ವಿದ್ಯಾವಿಕಾಸ ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ ದೇವಲಾಪುರ ಬೈಲಹೊಂಗಲ ಬೆಳಗಾವಿ carmelspl.scl@gmail.com |
| | | 56 | ಸಹಕಾರ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆ (ರಿ), ಯಕ್ಸಂಬಾ, ಚಿಕ್ಕೋಡಿ ತಾ॥, ಬೆಳಗಾವಿ ದೂ.ಸಂಖ್ಯೆ: | ಆಶಾಜ್ಯೋತಿ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ ಯಕ್ಸಂಬಾ ಬೆಳಗಾವಿ weetsexamba@gmail.com 08338-276124/9900559874 9686500582 Shashikala jolley |
| | | 57 | ಶ್ರೀ ರೇಣುಕಾ ವಿದ್ಯಾವರ್ಧಕ ಸಂಘ ರಿ, ಸರ್ಕಾರಿ ಆಸ್ಪತ್ರೆ ಹತ್ತಿರ, ಸವದತ್ತಿ, ಬೆಳಗಾವಿ ಜಿಲ್ಲೆ | ಶ್ರೀ ರೇಣುಕ ಕೃಪ ಬುದ್ಧಿ ವಿಕಲಚೇತನ ಮಕ್ಕಳ ವಸತಿಯುತ ಶಾಲೆ ಸವದತ್ತಿ ಬೆಳಗಾವಿ 08330–223727/ 9449938138 basavarajnghanti@gmail.com |

| ಕ್ರ ಸಂ | ಜಿಲ್ಲಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು |
|---|---|---|---|---|
| | | 58 | ಅಜಯ್ ವೆಲ್ಪೇರ್ ಅಸೋಸಿಯೇಷನ್ ಫಾರ್ ರಿಹ್ಯಾಬಿಲಿಟೇಷನ್ ಆಫ್ ಡಿಸೇಬಲ್ಡ್, ಜ್ಯೋತಿನಗರ, ಕಂಗ್ರಾಳಿ ಕೆಹೆಚ್, ಬೆಳಗಾವಿ ಜಿಲ್ಲೆ ಮೊ.ಸಂ.8884907972 | ಅಜಯ್ ಕಿವುಡು ಮತ್ತು ಮೂಕ ಮಕ್ಕಳ ವಸತಿಯುತ ಶಾಲೆ ajayinstitution.belgavi@gmail.com |
| | | 59 | ದೂದನಾನ ವಿಕಾಸ ಶಿಕ್ಷಣ ಸಂಸ್ಥೆ ರಿ, ಹಿಡಗಲ್ ಅಣೇಕಟ್ಟು, ಹುಕ್ಕೇರಿ ತಾ॥, ಬೆಳಗಾವಿ ಜಿಲ್ಲೆ ಮೊ.ಸಂ.8095388511 | ಬುದ್ಧಿವಿಕಲಚೇತನ ಮಕ್ಕಳ ವಸತಿಯುತ ಶಾಲೆ ಬೆಳಗಾವಿ shridvss@gmail.com ಮೊ.ಸಂ.8095388511, 9741658121 |
| | | 60 | ಬೆಳಗಾವಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ನಾಗನೂರ, ಗೋಕಾಕ್, ಬೆಳಗಾವಿ ದೂ.ಸಂ.09334–288622, 9448110979 | ಬರ್ಡ್ಸ್ ಕಿವುಡ ಮಕ್ಕಳ ವಸತಿಯುತ ಶಾಲೆ, ಎ.ಪಿ.ಎಂ.ಸಿ.ಆವರಣ, ಗೋಕಾಕ್ rmpatil0@gmail.com ದೂ.ಸಂ.09334–288622, 9448110979 |
| | | 61 | ಮಾವುಲಿ ಗ್ರಾಮೀಣ ವಿಕಾಸ ಅಪಂಗ ಪನರ್ವಸನ ಕೇಂದ್ರ ನಿಪ್ಪಾಣಿ, ಚಿಕ್ಕೋಡಿ, ಬೆಳಗಾವಿ ಜಿಲ್ಲೆ ಮೊ.ಸಂ.9663053761 | ನಿತಿನ್ ಕುಮಾರ್ ಕದಮ ಕಿವುಡು ಮಕ್ಕಳ ಶಾಲೆ 8338224298 ಮೊ.ಸಂ.9663053761 mauligraminapknipani@gmail.com |
| | | 62 | ಶ್ರೀ ಜೀಜಾಮಾತಾ ವಿಶ್ವ ಚೇತನಾಭಿವೃದ್ಧಿ ಸಂಸ್ಥೆ ರಿ, ಶಿವಯೋಗಿನಗರ, ಸಚಿನ್ ಪೆಟ್ರೋಲ್ ಬಂಕ್ ಎದುರಿಗೆ, ಕರಿಮಸೂತಿ ಹತ್ತಿರ, ವಿಜಯಪುರಸ್ತೆ, ಅಥಣಿ, ಬೆಳಗಾವಿ ಜಿಲ್ಲೆ ಮೊ.ಸಂ.9980855927 | ಶ್ರೀ ಶಾರದಾದೇವಿ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ shantaj4@gmail.com ಮೊ.ಸಂ.9980855927 |
| 11 | ವಿಜಯಪುರ | 63 | ಶ್ರೀ ಶಿವಶಂಕರ ವಿದ್ಯಾವರ್ಧಕ ಕೇಂದ್ರ ರಿ, ಝಳಕಿ ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ ದೂ.ಸಂ.: 9449712386, 9880652836, | ಶ್ರೀ ಗುರುಚಂದ್ರಶೇಖರ ಕಿವುಡ ಮತ್ತು ಮೂಕ ಮಕ್ಕಳ ವಸತಿಯುತ ಶಾಲೆ ಝಳಕಿ ಇಂಡಿ ತಾಲ್ಲೂಕು ವಿಜಯಪುರ |
| | | 64 | ಶ್ರೀ ಪರಮಾನಂದ ಜನಸೇವಾ ಸಮಿತಿ (ರಿ), ಗೊಲಗೇರಿ, ವಿಜಯಪುರ ಜಿಲ್ಲೆ ಇವರ ವತಿಯಿಂದ | ಸಿಂಧಗಿ ತಾಲ್ಲೂಕಿನ ಗೊಲಗೇರಿಯಲ್ಲಿ ನಡೆಸುತ್ತಿರುವ ಶ್ರವಣದೋಷವುಳ್ಳ ಮಕ್ಕಳ ವಸತಿಯುತ ಶಾಲೆಯ |
| | | 65 | ಶ್ರೀ ದಂಡಗುಂಡ ಬಸವೇಶ್ವರ ಶಿಕ್ಷಣ ಸಂಸ್ಥೆ (ರಿ), ವಿಜಯಪುರ | ಶ್ರವಣ ದೋಷ ವಸತಿಯುತ ಶಾಲೆ |
| 12 | ಬಾಗಲಕೋಟೆ | 66 | ಶ್ರೀ ಮುರುಗೇಂದ್ರ ಶಿವಾಚಾರ್ಯ ಮಹಾಸ್ವಾಮಿ ವಿದ್ಯಾಸಂಸ್ಥೆ(ರಿ), ದಿಂಡವಾರ, ಬಸವನಬಾಗೇವಾಡಿ ತಾ. ವಿಜಯಪುರ ಜಿಲ್ಲೆ. | ದಿಂಡಿವಾರ ಶ್ರೀ ಮುರುಗೇಂದ್ರ ಶಿವಾಚಾರ್ಯ ಶ್ರವಣದೋಷವುಳ್ಳ ಮಕ್ಕಳ ವಸತಿಯುತ ಶಾಲೆ ಬಾಗಲಕೋಟೆ Ph:08652-652854 shrikumarling swamigalu Ph : 8453446231 |
| | | 67 | ಶ್ರೀ ಯಲಗೂರೇಶ್ವರ ವಿದ್ಯಾವರ್ಧಕ ಸಂಘ ರಿ ಲಕ್ಷ್ಮೀನಗರ, ಅಮೀನ್‌ಗಢ, ಬಾಗಲಕೋಟೆ ಮೊ.ಸಂ.9886381346 | ಯಲಗೂರೇಶ್ವರ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ |
| | | 68 | ಸಮಗ್ರ ಜೀವನ ವಿಕಾಸ ಸಂಸ್ಥೆ ರಿ, ಮುಧೋಳ, ವಾರ್ಡ್ ನಂ.–2, ಹೌಸ್ ನಂ.537/ಬಿ ಮುಧೋಳ ಬಾಗಲಕೋಟೆ ಜಿಲ್ಲೆ | ಸಜೀವಿ ಅಂಧ ಮಕ್ಕಳ ವಸತಿಯುತ ಶಾಲೆ ಮುಧೋಳ್ ಬಾಗಲಕೋಟೆ Shri: M.B.Udupudi Ph: 08350-282777 Mo:9845298041 |
| | | 69 | ಸರ್ವೋದಯ ಮಹಿಳಾ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ರಿ ಜಮಖಂಡಿ ಬಾಗಲಕೋಟೆ ಮೊ.ಸಂ.9964951111 | ಸರ್ವೋದಯ ಕಿವುಡು ಮಕ್ಕಳ ವಸತಿಯುತ ಶಾಲೆ |
| | | 70 | ಶ್ರೀ ಶಿವ ಶಿಕ್ಷಣ ಸಂಸ್ಥೆ, ಕುಳಲಿ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಮೊ.ಸಂ.9449108542 | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ |
| | | 71 | ಕನಕದಾಸ ಗ್ರಾಮೀಣಾಭಿವೃದ್ಧಿ ಸಂಸ್ಥೆ (ರಿ), ಬೀಳಗಿ ತಾ॥, ಬಾಗಲಕೋಟೆ ಜಿಲ್ಲೆ | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ 9448897414 |

| ಕ್ರ ಸಂ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು |
|---|---|---|---|---|
| 13 | ಧಾರವಾಡ | 72 | ಶ್ರೀ ಆರೋಢ ಅಂಗವಿಕಲರ ಶಿಕ್ಷಣ ಸಂಸ್ಥೆ (ರಿ), ನಂ.17, 2ನೇ ಕ್ರಾಸ್, ಮಗಜಿಕೊಂಡಿ ಲೇಔಟ್, ಸಿದ್ಧಾರೂಢ ಮಠ ಮುಖ್ಯರಸ್ತೆ, ಹಳೇಹುಬ್ಬಳ್ಳಿ, ಮೊ.ಸಂ.9449669161 | ಅಂಧ ಮಕ್ಕಳ ವಸತಿಯುತ ಶಾಲೆ ಮೊ.ಸಂ.9449669161 |
| | | 73 | ಪ್ರಿಯದರ್ಶಿನಿ ಜನಸೇವಾ ಸಾಗರ ರಿ ಗುರುನಾಥ ನಗರ ಹಳೇ ಹುಬ್ಬಳ್ಳಿ ಧಾರವಾಡ ಜಿಲ್ಲೆ ಮೊ.ಸಂ.9880360200 | ಕಿವುಡ ಮತ್ತು ಮೂಕ ಮಕ್ಕಳ ವಸತಿಯುತ ಶಾಲೆ |
| | | 74 | ವಿಶ್ವಧರ್ಮ ಮಹಿಳಾ ಮತ್ತು ಮಕ್ಕಳ ಶಿಕ್ಷಣ ಸೇವಾಶ್ರಮ ಸಮಿತಿ ರಿ, ವೀರಾಪುರ ಓಣಿ, ಹಕ್ಕಲ, ಹುಬ್ಬಳ್ಳಿ, ಧಾರವಾಡ ಜಿಲ್ಲೆ | ವಿಶ್ವಧರ್ಮ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ ಮೊ.ಸಂ.9535701627 |
| | | 75 | ಮನೋವಿಕಾಸ ಇನ್ಸ್‌ಟಿಟ್ಯೂಟ್ ರಿಹ್ಯಾಬಿಲಿಟೇಷನ್ ಸರ್ವಿಸ್ ದೇವಾಂಗ ಬೀದಿ ಹುಬ್ಬಳ್ಳಿ ಧಾರವಾಡ ಮೊ.ಸಂ.9243281756 | ಮನೋವಿಕಾಸ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ ಮೊ.ಸಂ.9243281756 0836/2252756/9243281756 manovikasa@yahoo.com |
| | | 76 | ಹೊನ್ನಮ್ಮ ಶಿಕ್ಷಣ ಸಂಸ್ಥೆ ರಿ ಧಾರವಾಡ ಜಿಲ್ಲೆ | ಕಿವುಡ ಮಕ್ಕಳ ಪ್ರಾಥಮಿಕ ಹಾಗೂ ಪ್ರೌಢಶಾಲೆ ಧಾರವಾಡ ಎ.ವಿ.ಮೇಗೂರು 9343867950/ 2444886 |
| 14 | ಗದಗ | 77 | ಮಂಜು ಶಿಕ್ಷಣ ಸಂಸ್ಥೆ ರಿ, ಬಾಲಾಜಿ ರಸ್ತೆ, ಬೆಟಗೇರಿ, ಗದಗ ಜಿಲ್ಲೆ | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ 7795574508/08372-245745 mespschool.org |
| | | 78 | ಶ್ರೀ ವೆಂಕಟೇಶ್ವರ 'ಗ್ರಾಮಾಂತರ ಹಿಂದಿ ಪ್ರಚಾರಕ ಸಮಿತಿ ರಿ ಗದಗ ಮೊ.ಸಂ.:7795447540 | ಸ್ಪಂದನ ಕಿವುಡ ಮಕ್ಕಳ ವಸತಿರಹಿತ ಶಾಲೆ ಗದಗ |
| | | 79 | ಶ್ರೀ ಅನ್ನದಾನ ವಿಜಯ ವಿದ್ಯಾಪ್ರಸಾರಕ ಸಮಿತಿ ನರೇಗಲ್ಲ | ಕಿವುಡು ಮಕ್ಕಳ ವಸತಿಯುತ ಶಾಲೆ ರೋಣ ನರೇಗಲ್ 08381-268243/283234 |
| | | 80 | ಶ್ರೀ ಬಿ.ಡಿ ತಟ್ಟಿ (ಅಣ್ಣವರ) ಮೆಮೋರಿಯಲ್ ಚಾರಿಟಬಲ್ ಟ್ರಸ್ಟ್ ರಿ ಲಕ್ಷ್ಮೇಶ್ವರ ಗದಗ ಮೊ.ಸಂ.9448309994 | ಬಿ.ಡಿ ತಟ್ಟಿ ಕಿವುಡ ಮಕ್ಕಳ ವಸತಿಯುತ ಶಾಲೆ ಲಕ್ಷ್ಮೇಶ್ವರ ಗದಗ ಮೊ.ಸಂ.9448309994 ಸೋಮನಾಥ್ ಮಹಾಜನ್ |
| | | 81 | ಯೋಗೀಶ್ವರ ವಿವಿದೊದ್ದೇಶ ಸಂಸ್ಥೆ (ರಿ), ಹೊಳೆ ಆಲೂರು, ರೋಣ ತಾ॥. ಗದಗ ಜಿಲ್ಲೆ ಮೊ.ಸಂ.99445555574 gmail: jnanasindhuschool@gmail.com | ಜ್ಞಾನಸಿಂಧು ಅಂಧ ಮಕ್ಕಳ ವಸತಿಯತ ಶಾಲೆ, |
| | | 82 | ಅರಳು ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆ(ರಿ), ಗದಗ ಜಿಲ್ಲೆ | ಬುದ್ಧಿಮಾಂದ್ಯ ವಸತಿರಹಿತ ಶಾಲೆ |
| 15 | ಹಾವೇರಿ | 83 | ದಿವ್ಯಜ್ಯೋತಿ ವಿದ್ಯಾ ಸಂಸ್ಥೆ ರಿ, ಇಂಡಸ್ಟ್ರಿಯಲ್ ಏರಿಯಾ, ಇಜಾರಿ ಲಕ್ಮಾಪುರ, ಪಿ.ಬಿ.ರಸ್ತೆ, ಹಾವೇರಿ ಜಿಲ್ಲೆ ಮೊ.ಸಂ.8123442273 | ಜ್ಯೋತಿ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ ಹಾವೇರಿ ಮೊ.ಸಂ.8123442273 9742721833 ageeshhvr06@gmail.com |
| | | 84 | ಸೇವಾ ಟ್ರಸ್ಟ್ ಫಾರ್ ದಿ ಬ್ಲೈಂಡ್ ರಿ. 1ನೇ ಮುಖ್ಯರಸ್ತೆ, ಮಾರುತಿ ನಗರ, ರಾಣೇಬೆನ್ನೂರು, ಹಾವೇರಿ ಜಿಲ್ಲೆ ಮೊ.ಸಂ.9448309957 | ಶ್ರೀ ರೇಣುಕ ಎಲ್ಲಮ್ಮ ಕಿವುಡು ಮಕ್ಕಳ ಶಾಲೆ ಶಿವಕುಮಾರ್ sevatrustfortheblind@rrnr.org |
| | | 85 | ಚೈತನ್ಯ ಬುದ್ಧಿಮಾಂದ್ಯ ಮಕ್ಕಳ ತರಬೇತಿ ಮತ್ತು ಪುನರ್ವಸತಿ ಸಂಘ ರಿ, ರೈಲ್ವೆ ಸ್ಟೇಷನ್ ರಸ್ತೆ, ರೋಟರಿ ಶಾಲೆ ಹತ್ತಿರ, ರಾಣೇಬೆನ್ನೂರು, ಹಾವೇರಿ ಜಿಲ್ಲೆ ಮೊ.ಸಂ.8197002574 | ಚೈತನ್ಯ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ chaitanyarnr@gmail.com 08373-267655 |

| ಕ್ರ ಸಂ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು |
|---|---|---|---|---|
| | | 86 | ಜ್ಞಾನ ಪ್ರಜ್ಞಾ ಶಿಕ್ಷಣ ಸಂಸ್ಥೆ ರಿ. ಮುಂಡಗೋಡ ಜಿಲ್ಲೆ, ಕಾರವಾರ ದೂ.ಸಂ. 9845275024 | ಜ್ಞಾನಜ್ಯೋತಿ ಅಂಧ ಮಕ್ಕಳ ವಿಶೇಷ ಶಾಲೆ ಹಾವೇರಿಯ ಇಜಾರಿ-ಲಕಮಾಪುರ, ಹಾವೇರಿ ಜಿಲ್ಲೆ |
| | | 87 | ಶ್ರೀ ಚನ್ನಬಸವೇಶ್ವರ ಗ್ರಾಮೀಣ ವಿದ್ಯಾಸಂಸ್ಥೆ ರಿ ಶಿಗ್ಗಾಂವಿ ಹಾವೇರಿ | ಗಾನಯೋಗಿ ಪಂಡಿತ ಪಂಚಾಕ್ಷರಿ ಗವಾಯಿರವರ ಕಿವುಡ ಮಕ್ಕಳ ವಸತಿ ಶಾಲೆ ajannakunnur@gmail.com 08378-255262 |
| | | 88 | ಶ್ರೀ ಮಾರುತಿ ವಿದ್ಯಾಸಂಸ್ಥೆ ರಿ, ಸೋಮನಹಳ್ಳಿ, ಹಿರೇಕೆರೂರು ತಾ॥, ಹಾವೇರಿ ಜಿಲ್ಲೆ | ಶ್ರೀ ಜ್ಞಾನಕಿರಣ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ, ಕುಮಾರ ಪಟ್ಟಣ, ಕೊಡಿಯಾಲ ಅಂಚೆ, ರಾಣೆಬೆನ್ನೂರು ಹಾವೇರಿ ಜಿಲ್ಲೆ 8310067511 ಬಸವರಾಜ್ |
| | | 89 | ಕ್ರಾಂತಿವೀರ ಸಂಗೋಳ್ಳಿ ರಾಯಣ್ಣ ವಿದ್ಯಾ ಸಂಸ್ಥೆ (ರಿ), ಶಿಕ್ಷಕರ ಸಂಘದ ಹತ್ತಿರ, ಚರ್ಚ್ ರಸ್ತೆ, ರಾಣೆ ಬೆನ್ನೂರು, ಹಾವೇರಿ ಜಿಲ್ಲೆ. ದೂ.ಸಂ.9844809975 | ವಿದ್ಯಾಚೇತನ ಬುದ್ಧಿಮಾಂದ್ಯ ವಿಶೇಷ ವಸತಿಯುತ ಶಾಲೆ, ತೆರೆದಹಳ್ಳಿ ರಸ್ತೆ, ಅಂಗರಗಟ್ಟಿ ಅಂಚೆ, ಬ್ಯಾಡಗಿ ತಾ॥, ಹಾವೇರಿ ಜಿಲ್ಲೆ ದೂ.ಸಂ.9844809975 krantiveerasrgrs@gmail.com |
| | | 90 | ಶ್ರೀ ಸಿದ್ಧಿವಿನಾಯಕ ಸೇವಾ ಸಂಸ್ಥೆ (ರಿ), ಮಾಸೂರು, ಹಿರೇಕೆರೂರು, ಬ್ಯಾಡಗಿ ತಾಲ್ಲೂಕು, ಹಾವೇರಿ ಜಿಲ್ಲೆ | ನಂದಾದೀಪ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ವಿಶೇಷ ಶಾಲೆ |
| | | 91 | ವಿನೋದ ವಿದ್ಯಾಸಂಸ್ಥೆ (ರಿ), ಸಾ॥ ಕೊಟ್ಟಿಗೇರಿ, ಬಂಕಾಪುರ, ಶಿಗ್ಗಾವ ತಾ॥, ಹಾವೇರಿ ಜಿಲ್ಲೆ | ವಿನೋದ ವಿದ್ಯಾಸಂಸ್ಥೆ (ರಿ), ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ, ಸಾ॥ ಕೊಟ್ಟಿಗೇರಿ, ಬಂಕಾಪುರ, ಶಿಗ್ಗಾವ ತಾ॥, ಹಾವೇರಿ ಜಿಲ್ಲೆ |
| | | 92 | ನವೋದಯ ಅಂಗವಿಕಲರ ಸಂಸ್ಥೆ(ರಿ) ಹಾವೇರಿ | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ |
| | | 93 | ಅರುಣೋದಯ ಶಿಕ್ಷಣ ಸಂಸ್ಥೆ, ಕೋಡ, ಹಾವೇರಿ ಜಿಲ್ಲೆ | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ |
| 16 | ಉತ್ತರ ಕನ್ನಡ | 94 | ಜ್ಞಾನಪ್ರಜ್ಞ ವಿದ್ಯಾಸಂಸ್ಥೆ ರಿ, ದೇಶಪಾಂಡೆ ನಗರ, ಮುಂಡಗೋಡ, ಕಾರವಾರ ದೂ.ಸಂ: 9845275024 | ಜ್ಞಾನಪ್ರಜ್ಞಾ ಅಂಧ ಮಕ್ಕಳ ವಸತಿಯುತ ಶಾಲೆ ದೇಶಪಾಂಡೆ ನಗರ ಮುಂಡಗೋಡ ಕಾರವಾರ Ph:08389-222820/ 9845275024 Email: Jnanaprajnaeducational society@gmail.com |
| | | 95 | ಕಾರವಾರ ಡಾಯೋಸಿಸನ್ ಡೆವಲಪ್‌ಮೆಂಟ್ ಕೌನ್ಸಿಲ್, (ಕೆ.ಡಿ.ಡಿ.ಸಿ.) (ರಿ), ಬಿಷಪ್ ನಿವಾಸ, ಕಾರವಾರ-581302 | ಆಶಾ ನಿಕೇತನ ಕಿವುಡ ಮಕ್ಕಳ ವಸತಿಯುತ ಶಾಲೆ, ಬುಕ್ ಬೈಂಡರ್ ರಸ್ತೆ, ಕಾಜುಭಾಗ, ಕಾರವಾರ Ph:08382-220563 Email:kddckarwar@gmail.com kddskwr@sancharnet.in |
| | | 96 | ಬಾಪೂಜಿ ಗ್ರಾಮೀಣ ವಿಕಾಸ ಸಮಿತಿ ರಿ ಸಿದ್ಧರ ಕಾರವಾರ ಮೊ.ಸಂ.9448790652 | ಕಿವುಡ ಮತ್ತು ಮೂಕ ಮಕ್ಕಳ ವಸತಿಯುತ ಶಾಲೆ Ph:08382-289096 Email: bgvskwr@gmail.com |
| | | 97 | ಉತ್ತರ ಕನ್ನಡ ಜಿಲ್ಲೆ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಸ್ಥೆ ರಿ. ಬನವಾಸಿ ರಸ್ತೆ ಸಿರಸಿ ಉತ್ತರಕನ್ನಡ ಜಿಲ್ಲೆ | ಕಿವುಡ ಮತ್ತು ಮೂಕ ಮಕ್ಕಳ ವಸತಿಯುತ ಶಾಲೆ Ph:08384-225566 Email: narayangadikai@gmail.com |
| | | 98 | ಅಜಿತ ಮನೋಚೇತನಾ ಟ್ರಸ್ಟ್ ರಿ ಮರಾಠಿಕೊಪ್ಪ ಶಿರಸಿ ಉತ್ತರ ಕನ್ನಡ | ವಿಕಾಸ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ 08384-239079 Email: ajitmanochetana@gmail.com |
| | | 99 | ಮಲ್ಲಿಕಾರ್ಜುನ ಜನಸೇವಾ ಸೊಸೈಟಿ, ಯಲ್ಲಾಪುರ, ಉತ್ತರ ಕನ್ನಡ ಜಿಲ್ಲೆ ಮೊ.ಸಂ.8970769251 | ಶ್ರೀ ರಾಘವೇಂದ್ರ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ |

| ಕ್ರ ಸಂ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು |
|---|---|---|---|---|
| | | 100 | ಆಶಾಕಿರಣ ಟ್ರಸ್ಟ್, ಹಾಳದಕಟ್ಟಾ, ಸಿದ್ಧಾಪುರ. ಕಾರವಾರ ಮೊ.ಸಂ.9448076925l | ಶ್ರೀ ಜಗದ್ಗುರು ಮುರುಗರಾಜೇಂದ್ರ ಅಂಧ ಮಕ್ಕಳ ವಸತಿ ಶಾಲೆ ಮೊ.ಸಂ.9448076925l– ರಪಿಹೆಗಡೆ Ph:08389-231603 oovinamane@gmail.com |
| 17 | ಚಿಕ್ಕಮಗಳೂರು | 101 | ಶ್ರೀ ನಿವೇದಿತಾ ವಿದ್ಯಾಸಂಸ್ಥೆ ಬಿಕ್ಕೋಡು ಬೇಲೂರು ತಾ. ಹಾಸನ ಜಿಲ್ಲೆ ಮೊ.ಸಂ.9742627256 | ನಿವೇದಿತಾ ವಿದ್ಯಾ ಶ್ರವಣದೋಷವುಳ್ಳ ಮಕ್ಕಳ ವಸತಿ ಶಾಲೆ ಕಡೂರು ಚಿಕ್ಕಮಗಳೂರು |
| | | 102 | ಶ್ರೀ ನಿವೇದಿತಾ ವಿದ್ಯಾಸಂಸ್ಥೆ (ರಿ), ಬಿಕ್ಕೋಡು ಬೇಲೂರು ತಾ. ಹಾಸನ ಜಿಲ್ಲೆ ಮೊ.ಸಂ.9742627256 | ನಿವೇದಿತಾ ವಿದ್ಯಾ ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ, 2ನೇ ಕ್ರಾಸ್, ಕಡೂರು, ಚಿಕ್ಕಮಗಳೂರು ಜಿಲ್ಲೆ ಕಡೂರು ಚಿಕ್ಕಮಗಳೂರು |
| **18** | ದಕ್ಷಿಣ ಕನ್ನಡ | 103 | ಆರ್ಸುಲೈನ್ ಫ್ರಾನ್ಸಿಸ್ಕನ್ ಎಜುಕೇಷನ್ ಸೊಸೈಟಿ ದಕ್ಷಿಣ ಕನ್ನಡ ಜಿಲ್ಲೆ (ಬುದ್ಧಿಮಾಂದ್ಯ) | ಅರ್ಸುಲೈನ್ ಕ್ರಿಸ್ತರಾಜ ನವಚೇತನ ವಿಶೇಷ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ ವೇಣೂರು ಬೆಳ್ತಂಗಡಿ ದಕ್ಷಿಣ ಕನ್ನಡ ಜಿಲ್ಲೆ |
| | | 104 | ಲಯನ್ಸ್ ಸೇವಾ ಟ್ರಸ್ಟ್ ರಿ ಸುರತ್ಕಲ್ ಮಂಗಳೂರು | ಲಯನ್ಸ್ ಬುದ್ಧಿಮಾಂದ್ಯರ ವಸತಿರಹಿತ ಶಾಲೆ, ಮಂಗಳೂರು |
| | | 105 | ಗಣೇಶ ಸೇವಾ ಟ್ರಸ್ಟ್ ಫಾರ್ ಎಕ್ಸೆಪ್ಷನಲ್ ಪರ್ಸನ್ಸ್ ರಿ, ಶಕ್ತಿನಗರ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ (ಬುದ್ಧಿಮಾಂದ್ಯ) | ಸಾನಿಧ್ಯ ಮಾನಸಿಕ ಭಿನ್ನ ಸಾಮರ್ಥ್ಯ ಮಕ್ಕಳ ವಸತಿಯುತ ಶಾಲೆ, ಮಂಗಳೂರು |
| | | 106 | ಜೀವನ್ ಜ್ಯೋತಿ ಚಾರಿಟೇಬಲ್ ಟ್ರಸ್ಟ್ ರಿ ಕಿನ್ನಿಗೋಳಿ, ಮಂಗಳೂರು | ಜೀವನ್ ಜ್ಯೋತಿ ಸೆಂಟ್‌ಮೇರಿಸ್ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ |
| | | 107 | ಎಂ.ಬಿ.ಫೌಂಡೇಷನ್ (ರಿ), ಕೃಷ್ಣ ಬಿಲ್ಡಿಂಗ್, ಸುಳ್ಯ ತಾ॥, ಸುಳ್ಯ ಪೋಸ್ಟ್, ದಕ್ಷಿಣ ಕನ್ನಡ ಜಿಲ್ಲೆ-574237 ದೂ.ಸಂ.9448141339 /9972951559 | ಸಾಂದೀಪ ವಿಕಲಚೇತನ ಮಕ್ಕಳ ವಿಶೇಷ ಶಾಲೆ, ಮೊಳಹಳ್ಳಿ, ಶಿವರಾವ್ ರಸ್ತೆ, ಸುಳ್ಯ ಅಂಚೆ, ಸುಳ್ಯ ತಾ॥ |
| | | 108 | ಸೇವಾ ಭಾರತಿ ಟ್ರಸ್ಟ್ (ರಿ), ಬಾಲಮಾರುತಿ ವ್ಯಾಯಾಮ ಮಂಡಳಿ, ವಿ.ಟಿ.ರಸ್ತೆ, ಮಂಗಳೂರು ಮೊ.ಸಂ.9880543918 | ಚೇತನಾ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ, ಮಂಗಳೂರು |
| | | 109 | ಸೇವಾಭಾರತಿ ಟ್ರಸ್ಟ್ (ರಿ), ಬಾಲಮಾರುತಿ ವ್ಯಾಯಾಮ ಮಂಡಳಿ, ವಿ.ಟಿ.ರಸ್ತೆ, ಮಂಗಳೂರು ಮೊ.ಸಂ.9880543918 | ಕ್ಯಾಥರಿನ್ ಲೋಬೋ ಅಂಧ ಮಕ್ಕಳ ಶಾಲೆ, ಕೋಣಿಬಿಜೈ, ಮಂಗಳೂರು |
| | | 110 | ಬೆಥನಿ ಧರ್ಮಸೇನಾ ಸಂಘ, ನೆಲ್ಯಾಡಿ. ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ | ಬೆಥನಿ ಜೀವನಜ್ಯೋತಿ ಬುದ್ಧಿಮಾಂದ್ಯ ಮಕ್ಕಳ ಶಾಲೆ |
| **19** | ಹಾಸನ | 111 | ವಿದ್ಯಾರಣ್ಯ ರಿ ಮಂಡೂರು ಬೆಂಗಳೂರು ಪೂರ್ವ ತಾಲ್ಲೂಕು | ಅವಕಾಶ ಬುದ್ಧಿವಿಕಲಚೇತನ ಮಕ್ಕಳ ಶಾಲೆ ಚನ್ನರಾಯಪಟ್ಟಣ ಹಾಸನ |
| | | 112 | ರೋಟರಿ ಟ್ರಸ್ಟ್, ಎನ್.ಕೆ.ಗಣಪಯ್ಯ ರೋಟರಿ ಶ್ರವಣದೋಷವುಳ್ಳ ಮಕ್ಕಳ ಶಾಲೆ, ಕೌಡಳ್ಳಿ, ಆನೇಮಹಲ್ ಅಂಚೆ, ಸಕಲೇಶಪುರ ತಾ॥, ಹಾಸನ ಜಿಲ್ಲೆ | ಎನ್.ಕೆ.ಗಣಪಯ್ಯ ರೋಟರಿ ಶ್ರವಣದೋಷವುಳ್ಳ ಮಕ್ಕಳ ಶಾಲೆ, |
| | | 113 | ಕರ್ನಾಟಕ ಹ್ಯಾಂಡಿಕ್ಯಾಪ್ಡ್ ವೆಲ್ಫೇರ್ ಅಸೋಸಿಯೇಷನ್, ನಂ.06, (ಸಿ.ಎ.) ಬಸ್ ಸ್ಟ್ಯಾಂಡ್ ಎದುರು, ಜೀವನ್ ಭೀಮಾನಗರ, ಬೆಂಗಳೂರು-560075 | ಜೀವನ ಜ್ಯೋತಿ ಕಿವುಡು ಮಕ್ಕಳ ವಿಶೇಷ ವಸತಿಯುತ ಶಾಲೆ |
| | | 114 | ಸಾಧ್ಯ ಟ್ರಸ್ಟ್ ಫಾರ್ ಸೋಷಿಯಲ್ ಡೆವಲಪ್‌ಮೆಂಟ್ (ರಿ) ಮಡಿಕೇರಿ | ಸಾಧ್ಯ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ. ಕೆ ಆರ್ ಪುರಂ, ಹಾಸನ ಜಿಲ್ಲೆ |

| ಕ್ರ ಸಂ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು |
|---|---|---|---|---|
| 20 | ಕೊಡಗು | 115 | ಚೆಶೈರ್ ಹೋಮ್, ಕೊಡಗು | ಬುದ್ಧಿಮಾಂದ್ಯ ಮಕ್ಕಳ ಶಾಲೆ |
| | | 116 | ಕೊಡಗು ವಿದ್ಯಾಲಯ, ಸಿದ್ದಾಪುರ ರಸ್ತೆ, ಕೊಡಗು, ಮಡಿಕೇರಿಜಿಲ್ಲೆ, | ಆಪರ್ಚುನಿಟಿ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ ಮಡಿಕೇರಿ |
| | | 117 | ಶ್ರೀ ಭೈರವೇಶ್ವರ ಎಜುಕೇಷನ್ ಟ್ರಸ್ಟ್ (ರಿ) ಕೊಡಗು | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ |
| 21 | ಮೈಸೂರು | 118 | ಸಾಯಿರಂಗ ವಿದ್ಯಾಸಂಸ್ಥೆ ಕಿವುಡು ಗಂಡು ಮಕ್ಕಳ ವಸತಿ ಪಾಠಶಾಲೆ #764/ಎ, ಬಿ ಬಡಾವಣೆ ಬನ್ನಿಮಂಟಪ ಮೈಸೂರು | ಸಾಯಿರಂಗ ಕಿವುಡು ಗಂಡು ಮಕ್ಕಳ ವಸತಿಯುತ ಶಾಲೆ, ಮೈಸೂರು |
| | | 119 | ಡಾಟರ್ಸ್ ಆಫ್ ಅವರ್ ಲೇಡಿ ಮರ್ಸಿ ಕಿವುಡು ಹೆಣ್ಣು ಮಕ್ಕಳ ವಸತಿ ಪಾಠಶಾಲೆ, ಓಲ್ಡ್ ಹೆಚ್.ಡಿ.ಕೋಟೆ ರಸ್ತೆ, ಶ್ರೀರಾಂಪುರ ಮೈಸೂರು | ಮರ್ಸಿ ಶ್ರವಣದೋಷವುಳ್ಳ ಮಕ್ಕಳ ಶಾಲೆ, ಮೈಸೂರು |
| | | 120 | ರಂಗರಾವ್ ಸ್ಮಾರಕ ಅಂಗವಿಕಲರ ಶಾಲೆ – ಅಂಧ ಹೆಣ್ಣು ಮಕ್ಕಳ ವಸತಿ ಶಾಲೆ #1/ಸಿ, ಕೆ.ಆರ್.ಎಸ್ ರಸ್ತೆ ಮೇಟಗಳ್ಳಿ ಮೈಸೂರು | ರಂಗರಾವ್ ಸ್ಮಾರಕ ಅಂಧ ಹೆಣ್ಣು ಮಕ್ಕಳ ವಸತಿಶಾಲೆ, ಮೈಸೂರು |
| | | 121 | ಪುಟ್ಟೀರಮ್ಮ ಕಿವುಡ ಮಕ್ಕಳ ವಸತಿ ಶಾಲೆ #350, ವಾಗ್ದೇವಿನಗರ, ಗಂಗೋತ್ರಿ ಬಡಾವಣೆ, ಮೈಸೂರು ಮೊ.ಸಂ.9980057655 | ಶ್ರೀಮತಿ ಪುಟ್ಟೀರಮ್ಮ ಕಿವುಡು ಹೆಣ್ಣು ಮಕ್ಕಳ ವಸತಿಯುತ ಶಾಲೆ, ಮೈಸೂರು |
| | | 122 | ಮಾತೃಮಂಡಳಿ ಶಿಶು ವಿಕಾಸ ಕೇಂದ್ರ, 382/13, 3ನೇ ಹಂತ, ಗೋಕುಲಂ, ವಿ.ವಿ.ಮೊಹಲ್ಲಾ, ಮೈಸೂರು | ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ, ಮೈಸೂರು |
| | | 123 | ಮೈತ್ರಿ ಚಾರಿಟಬಲ್ ಟ್ರಸ್ಟ್ (ರಿ), ಕುವೆಂಪುನಗರ, ಹೆಚ್.ಐ.ಜಿ ನಂ.2, ಕೆ-ಬ್ಲಾಕ್, ರಮಣ ಮಹರ್ಷಿ ಜ್ಞಾನ ಕೇಂದ್ರ ಹತ್ತಿರ, ಕುವೆಂಪುನಗರ, ಮೈಸೂರು-570023 | ಬುದ್ಧಿಮಾಂದ್ಯ ಮಕ್ಕಳ ವಸತಿ ರಹಿತ ಶಾಲೆ, ಮೈಸೂರು ದೂ.ಸಂ.0821-3558084, 8618223393 E Mail ID mythricharitabletrustmysore@gmail.com |
| | | 124 | ಕರುಣಾಮಯಿ ಫೌಂಡೇಶನ್ (ರಿ), #61, ಸಿ ಬ್ಲಾಕ್, 2ನೇ ಅಡ್ಡರಸ್ತೆ, ಕನಕದಾಸನಗರ, ದಟ್ಟಗಳ್ಳಿ, ಮೈಸೂರು-570023 | ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ದೂ.ಸಂ.:0821-2970685, 9480024141 E mail Id: karunamyeefd@gmail.com |
| | | 125 | ಸೊಸೈಟಿ ಆಫ್ ಜೀಸಸ್ ಮೇರಿ ಜೋಸೆಫ್,ಬೆಂಗಳೂರು ಪ್ರಾವಿನೆನ್ಸ್, ಡೋರ್ನಹಳ್ಳಿ, ಕೆ.ಆರ್. ನಗರ ತಾ: ಮೈಸೂರು ಜಿಲ್ಲೆ | ಬುದ್ಧಿಮಾಂದ್ಯ ವಸತಿಯುತ ಶಾಲೆ |
| 22 | ಮಂಡ್ಯ | 126 | ಜ್ಞಾನವಿಕಾಸ ಎಜುಕೇಷನ್ ಟ್ರಸ್ಟ್ ರಿ, ಪಾಂಡವಪುರ ತಾ॥, ಮಂಡ್ಯ ಜಿಲ್ಲೆ | ಜ್ಞಾನವಿಕಾಸ ಕಿವುಡು ಮತ್ತು ಮೂಕ ಮಕ್ಕಳ ವಸತಿಶಾಲೆ ಚಿನಕುರಳಿ, ಪಾಂಡವಪುರ , ಮಂಡ್ಯ ಜಿಲ್ಲೆ |
| | | 127 | ಜ್ಞಾನವಿಕಾಸ ಎಜುಕೇಷನ್ ಟ್ರಸ್ಟ್ ರಿ, ಪಾಂಡವಪುರ ತಾ॥, ಮಂಡ್ಯ ಜಿಲ್ಲೆ | ಜ್ಞಾನವಿಕಾಸ ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ ಮೊಗರಹಳ್ಳಿ, ಶ್ರೀರಂಗಪಟ್ಟಣ ತಾ: ಮಂಡ್ಯ |
| | | 128 | ಸೆಂಟ್ ಥಾಮಸ್ ಮಿಷನ್ ಸೊಸೈಟಿ ಮಂಡ್ಯ | ಆಶಾ ಸದನ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ, ಕಿರಂಗದೂರು, ಮದ್ದೂರು ತಾ: |
| | | 129 | ಸೆಂಟ್ ಥಾಮಸ್ ಮಿಷನ್ ಸೊಸೈಟಿ, ಸಾಥೋಂ, ಪೋಸ್ಟ್ ಬಾಕ್ಸ್ ನಂ.43, ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು ಹತ್ತಿರ, ಮಂಡ್ಯ ಜಿಲ್ಲೆ ಮಂಡ್ಯ | ಪ್ರೀತಿ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ, ಗೊಲ್ಲರ ದೊಡ್ಡಿ, ಮರಳಿಗೆ ಅಂಚೆ, ಕೊಪ್ಪ ಹೋಬಳಿ, ಮದ್ದೂರು ತಾ॥, ಮಂಡ್ಯ ಜಿಲ್ಲೆ. |

| ಕ್ರ ಸಂ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು |
|---|---|---|---|---|
| | | 130 | ಮಾಂಟ್ ಪೋರ್ಟ್ ಎಜುಕೇಷನ್ ಅಂಡ್ ಚಾರಿಟೇಬಲ್ ಟ್ರಸ್ಟ್, ಲೇಕ್ ಮೌಂಟ್‌ಫೋರ್ಟ್ ಶಾಲೆ, ಕುರುಡು ಸೊನ್ನೇನಹಳ್ಳಿ, ವಿರ್ಗೋನಗರ ಅಂಚೆ, ಬೆಂಗಳೂರು | ಮಾಂಟ್‌ಫೋರ್ಟ್ ಕಿವುಡ ಮಕ್ಕಳ ವಸತಿ ಶಾಲೆ, ಬೆಳಗೊಳ, ಶ್ರೀರಂಗಪಟ್ಟಣ ತಾ. ಮಂಡ್ಯ ಜಿಲ್ಲೆ |
| | | 131 | ಶ್ರೀ ಬಸವೇಶ್ವರ ವಿದ್ಯಾಸಂಸ್ಥೆ(ರಿ) ಚಿಕ್ಕಬ್ಯಾಡರಹಳ್ಳಿ, ಪಾಂಡವಪುರ ತಾ: ಮಂಡ್ಯ ಜಿಲ್ಲೆ. | ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ |
| 23 | ಉಡುಪಿ | 132 | ಭಾರತಿ ಸೇವಾ ಮಂಡಳಿ ರಿ ಕಾರ್ಕಳ ಉಡುಪಿ (ಬುದ್ಧಿಮಾಂದ್ಯ) | ಚೇತನ ವಿಶೇಷ ವಸತಿರಹಿತ ಶಾಲೆ ಮತ್ತು ವೃತ್ತಿ ತರಬೇತಿ ಸಂಸ್ಥೆ ಆನೆಕೆರೆ ಕಾರ್ಕಳ ಉಡುಪಿ ಜಿಲ್ಲೆ |
| | | 133 | ವಾಗ್ಜ್ಯೋತಿ ಡೆಫ್ ಅಂಡ್ ಡಂಬ್ ಡಿಸೇಬಲ್ಡ್ ಸೊಸೈಟಿ (ರಿ), ಮೂಡುಬಗೆ, ಅಂಪಾರು, ಕುಂದಾಪುರ ತಾ॥, ಕುಂದಾಪುರ ಉಡುಪಿ | ವಾಗ್ಜ್ಯೋತಿ ಶ್ರವಣದೋಷವುಳ್ಳ ಮಕ್ಕಳ ವಸತಿಯುತ ಶಾಲೆ, ಉಡುಪಿ ಜಿಲ್ಲೆ |
| | | 134 | ಮಾನಸ ಪುವರ್ನಸತಿ ಮತ್ತು ತರಬೇತಿ ಕೇಂದ್ರ ಉಡುಪಿ ಮೊ.ಸಂ.9886132013 | ಮಾನಸ ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ ಹಾಗೂ ಪುನರ್ವಸತಿ ಕೇಂದ್ರ ಉಡುಪಿ |
| | | 135 | ಕರ್ನಾಟಕ ಸದರ್ನ್ ಡಯೋಸಿಸ್ ಎಜುಕೇಷನಲ್ ಸೊಸೈಟಿ ಮಂಗಳೂರು ಮೊ.ಸಂ.9742352647 | ಆಶಾನಿಲಯ ಬುದ್ಧಿಮಾಂಧ್ಯ ಮಕ್ಕಳ ವಸತಿಶಾಲೆ ಉಡುಪಿ |
| | | 136 | ಮಹಿಳಾ ಸಮಾಜ ಸೇವಾ ಟ್ರಸ್ಟ್ (ರಿ), ಕುಂದಾಪುರ, ಉಡುಪಿ | ಚೈತನ್ಯ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ವಿಶೇಷ ಶಾಲೆ, ವಡೇರಹಳ್ಳಿ, ಉಡುಪಿ ಜಿಲ್ಲೆ |
| | | 137 | ಗುರುರಾಘವೇಂದ್ರ ಸೇವಾ ಟ್ರಸ್ಟ್ (ರಿ) ಕಾರ್ಕಳ, ಉಡುಪಿ ಜಿಲ್ಲೆ | ವಿಜೇತ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ, ಪರುಪ್ಪು, ಕಾರ್ಕಳ, ಉಡುಪಿ ಜಿಲ್ಲೆ |
| | | 138 | ತಲ್ಲೂರು ಫ್ಯಾಮಿಲಿ ಟ್ರಸ್ಟ್(ರಿ), ತಲ್ಲೂರು, ನಾರಾಯಣ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ, ಎನ್‌ಹೆಚ್–6, ತಲ್ಲೂರು, ಕುಂದಾಪುರ, ಉಡುಪಿ ಜಿಲ್ಲೆ | ನಾರಾಯಣ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ ದೂ.ಸಂ.:9480409247, 9449615442 E Mail Id: tallurspecialschool@gmail.com |
| | | 139 | ಡಾ. ಶೈನಾ ಮೆಮೋರಿಯಲ್ ಸ್ಮಾರಕ ಟ್ರಸ್ಟ್ (ರಿ), ಕಡೆಕಾರು, ಪಡುಕೆರೆ, ಕುದ್ರುಕೆರೆ ಅಂಚೆ, ಮ್ಲಲ್ಪೆ, ಉಡುಪಿ–576108 ದೂ.ಸಂ.:9742352647, 9845249042 gmail ID: karunyaspschool@gmail.com | ಕಾರುಣ್ಯ ವಿಶೇಷ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ, ಡಾ.ಶೈನಾ ಸ್ಮಾರಕ ಟ್ರಸ್ಟ್ (ರಿ), ಕಡೆಕಾರು, ಪಡುಕೆರೆ, ಕುದ್ರುಕೆರೆ ಅಂಚೆ, ಮ್ಲಲ್ಪೆ, ಉಡುಪಿ–576108 |
| | | 140 | ತೌಹಿದ್ ಎಜುಕೇಷನ್ ಟ್ರಸ್ಟ್, ಉಡುಪಿ | ಬುದ್ಧಿಮಾಂದ್ಯ ಮಕ್ಕಳ ವಿಶೇಷ ವಸತಿರಹಿತ ಶಾಲೆ |
| 24 | ಬಳ್ಳಾರಿ | 141 | ಡಾ.ಭೀಮ ವಿದ್ಯಾಸಂಸ್ಥೆ ರಿ, 15ನೇ ವಾರ್ಡ್, ಹನುಮಂತ ನಗರ, ಶಿರಗುಪ್ಪ, ಬಳ್ಳಾರಿ | ಜ್ಞಾನೋದಯ ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ 9945187825 |
| | | 142 | ವಿಶ್ವಭಾರತಿ ಕಲಾನಿಕೇತನ ಮತ್ತು ಶಿಕ್ಷಣ ಸಂಸ್ಥೆ, ಬೆಳಗಲ್ ರಸ್ತೆ, ಬಳ್ಳಾರಿ | ಜಿ.ಚೆಂಗಾರೆಡ್ಡಿ ಸ್ಮಾರಕ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ vbkesbellary@gmail.com, Ph: 9483639242 |
| | | 143 | ಅನುಗ್ರಹ ಫೌಂಡೇಷನ್ ಟ್ರಸ್ಟ್, ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ, ಬಳ್ಳಾರಿ | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ, ಬಳ್ಳಾರಿ |
| | | 144 | ಸಾಧ್ಯ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ, ಹೊಸಪೇಟೆ, ಬಳ್ಳಾರಿ | ಸಾಧ್ಯ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ, ಹೊಸಪೇಟೆ, ಬಳ್ಳಾರಿ |
| | | 145 | ಸ್ಟೀಲ್ ಸಂಸ್ಥೆ, ಎ.ಪಿ.ಎಂ.ಸಿ.ಹತ್ತಿರ, ಕುರುಗೋಡು, ಬಳ್ಳಾರಿ ತಾ॥, ಜಿಲ್ಲೆ | ದೊಡ್ಡಬಸವೇಶ್ವರ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ |

| ಕ್ರ ಸಂ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು |
|---|---|---|---|---|
| | | 146 | ವಾತ್ಸಲ್ಯ ಟ್ರಸ್ಟ್, ಸರ್ವೆ ನಂ.13,ಅಮೃತ ಶಕ್ತಿ ಲೇಔಟ್, ಅನಂತಶಯನ ಗುಡಿ, ಹೊಸಪೇಟೆ, ಬಳ್ಳಾರಿ ಜಿಲ್ಲೆ | ಆಕಾಂಕ್ಷ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ |
| 25 | ಬೀದರ್ | 147 | ಶ್ರೀ ಮಾಣಿಕ್ ಪ್ರಭು ಶಿಕ್ಷಣ ಸಂಸ್ಥೆ, ಮಾಣಿಕ್ ನಗರ, ಹುಮ್ನಾಬಾದ್ ತಾ॥, ಹುಮನಾಬಾದ್ ಬೀದರ್-585353 ಬೀದರ್ ಜಿಲ್ಲೆ. ದೂ.ಸಂ: 08483-270742 | ಶ್ರೀ ಮಾಣಿಕ್ ಪ್ರಭು ದೃಷ್ಟಿದೋಷವುಳ್ಳ ಮಕ್ಕಳ ವಸತಿ ಶಾಲೆ, ಮಾಣಿಕ್ ನಗರ, ಬೀದರ್ maniknagar@gamil.com 9448128389 |
| | | 148 | ಡಾ.ಬಿ.ಆರ್. ಅಂಬೇಡ್ಕರ್ ಕಲ್ಚರಲ್ ಅಂಡ್ ವೆಲ್ಫೇರ್ ಸೊಸೈಟಿ, ನಂ.8-11-229, ಹೌಸ್ ಆಫ್ ಡೌನ್, ಎಸ್.ಬಿ.ಹೆಚ್.ಕಾಲೋನಿ, ಕೆ.ಇ.ಬಿ.ರಸ್ತೆ, ಬೀದರ್-58541, ದೂ.ಸಂ:9448258667 | abedkarswc@gamil.com AnilkumarBeldare:9448258667 |
| | | 149 | ಶ್ರೀ ಲಕ್ಷ್ಮೀ ವಿದ್ಯಾವರ್ಧಕ ಸಂಘ ರಿ, ಮುಡುಬಿ ತಾಲ್ಲೂಕು, ಬಸವಕಲ್ಯಾಣ, ಬೀದರ್ ಜಿಲ್ಲೆ | ಶ್ರದ್ಧಾಂಜಲಿ ಶ್ರವಣದೋಷವುಳ್ಳ ಮಕ್ಕಳ ವಸತಿಯುತ ಶಾಲೆ 8494969797 sshradhanjalideaf@gmail.com |
| | | 150 | ಮಹಾಪ್ರಜಾಪತಿ ಶಿಕ್ಷಣ ಸಮಿತಿ(ರಿ), ದನ್ನೂರ (ಎಸ್), ಭಾಲ್ಕಿ ತಾ॥, ಬೀದರ್ ಜಿಲ್ಲೆ | ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ವಿಶೇಷ ಶಾಲೆ ಶ್ರೀ ಸಂಜು 9845130982 |
| | | 151 | ಶ್ವೇತಾ ಮಹಿಳಾ ವಿಕಾಸ ಸಮಿತಿ (ರಿ), ಕಡ್ಯಾಳ, ಝಿಯೋನ್ ಕಾಲೋನಿ, ಕುಂಬಾರವಾಡ, ಬೀದರ್ | ಅಮೂಲ್ಯ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ವಿಶೇಷ ಶಾಲೆ, ಶ್ರೀ ರಾಜು ಕಡ್ಯಾಳ 9448717042 |
| | | 152 | ಮಾರುತಿ ಹೆಲ್ತ್ ವೆಲ್ಫೇರ್ ಟ್ರಸ್ಟ್, ಗುರುನಗರ, ಬೀದರ್ ಜಿಲ್ಲೆ | ವಿಶ್ವಾಸ ಬುದ್ಧಿಮಾಂದ್ಯ (ವಿಶೇಷ ಮಕ್ಕಳ) ವಸತಿ ರಹಿತ ಶಾಲೆ, ಗೈಲ್ವೆ ಗೇಟ್ ನೌದಾದ, ಬೀದರ್ ಜಿಲ್ಲೆ |
| | | 153 | ಸಿದ್ದೇಶ್ವರ ದೈಹಿಕ ಅಂಗವಿಕಲರ ಶಿಕ್ಷಣ ಸಂಸ್ಥೆ, ಶಾಮರಾಜಪುರ (ಅಗ್ರಹಾರ), ಬೀದರ್ ಜಿಲ್ಲೆ | ಸಿದ್ದೇಶ್ವರ ಬುದ್ಧಿಮಾಂದ್ಯ ವಸತಿಯುತ ಶಾಲೆ |
| | | 154 | ಹರಿ ಓಂ ಜ್ಞಾನ ದೀಪ ರೂರಲ್ ಎಜುಕೇಷನ್ ಸೊಸೈಟಿ, ಭಾಲ್ಕಿ ಬೀದರ್ | ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ |
| 26 | ಗುಲ್ಬರ್ಗ | 155 | ಬ್ಲೈಂಡ್ ಅಂಡ್ ಹ್ಯಾಂಡಿಕ್ಯಾಪ್ಡ್ ಚಿಲ್ಡ್ರನ್ ವೆಲ್ಫೇರ್ ಅಸೋಸಿಯೇಷನ್, ಅಫಜಲ್‌ಪುರ, ಗುಲ್ಬರ್ಗ | ಅಂಧ ಹಾಗೂ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಸ್ಥೆ (ರಿ), ಶ್ರೀ ವಿ.ಕೆ.ಜಿ. ಅಂಧ ಬಾಲಕ ಬಾಲಕಿಯರ ವಸತಿಯುತ ಪ್ರಾಥಮಿಕ ಹಾಗೂ ಮಾಧ್ಯಮಿಕ ಪ್ರೌಢಶಾಲೆ, ಎಂ.ಜಿ.ನಗರ, ಅಫಜಲಪೂರ-585301 ದೂ.ಸಂ: 9880629865, 7353428074 |
| | | 156 | ದಕ್ಷಿಣ ಭಾರತ ದಲಿತ ವಿದ್ಯಾಸಂಸ್ಥೆ (ರಿ), ಪ್ಲಾಟ್ ನಂ.113-118, ಪ್ರೊಫೆಸರ್ ಕಾಲೋನಿ, ಸೇಡಂ ರಸ್ತೆ, ಗುಲ್ಬರ್ಗಾ | ಸಿದ್ಧಾರ್ಥ ಕಿವುಡು ಮತ್ತು ಮೂಕ ಬಾಲ ಬಾಲಕಿಯರ ವಸತಿಯುತ ಶಾಲೆ |
| | | 157 | ವಿನಾಯಕ ವಿದ್ಯಾ ಟ್ರಸ್ಟ್, ನಂ. 10-105/4, ಎಸ್.ವಿ.ಶಾಲೆ ಎದುರುಗಡೆ, ಶರಣನಗರ, ಕಲಬುರ್ಗಿ ದೂ.ಸಂ:08472-225458 ಮೊ.ಸಂ.9980817060 | ಪರಿವರ್ತನಾ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ವಿಶೇಷ ಶಾಲೆ vinayakaeducational131@gmail.com |
| 27 | ಕೊಪ್ಪಳ | 158 | ಅಂಗವಿಕಲರ ಪುನಶ್ಚೇತನ ಸಂಸ್ಥೆ (ಏಆರ್‌ಡಿ), ವಿವೇಕಾನಂದ ಕಾಲೋನಿ, ಗಂಗಾವತಿ-583227. ಕೊಪ್ಪಳ ಜಿಲ್ಲೆ | ಮಾನಸ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ, ದಾಸನಾಳ, ಬಸಾಪಟ್ಟಣ (ಅಂಚೆ), ಗಂಗಾವತಿ ತಾ॥, ಕೊಪ್ಪಳ ಜಿಲ್ಲೆ ದೂ.ಸಂ.08533-238178, 238177 |
| | | 159 | ಲಯನ್ಸ್ ಚಾರಿಟೇಬಲ್ ಟ್ರಸ್ಟ್, ಗಂಗಾವತಿ ಕೊಪ್ಪಳ ಜಿಲ್ಲೆ | ಲಯನ್ಸ್ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ, |

| ಕ್ರ ಸಂ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು |
|---|---|---|---|---|
| 28 | ರಾಯಚೂರು | 160 | ಶ್ರೀ ಮಾಣಿಕ್ ಪ್ರಭು ಶಿಕ್ಷಣ ಸಮಿತಿ, ಮಾಣಿಕ್ ನಗರ, ಹುಮ್ನಾಬಾದ್ ತಾ॥. ಬೀದರ್ ಜಿಲ್ಲೆ ದೂ.ಸಂ: 08483-270742 ಮೊ.ಸಂ.9480167551 | ಶ್ರೀ ಮಾಣಿಕ್ ಪ್ರಭು ದೃಷ್ಟಿದೋಷವುಳ್ಳ ಮಕ್ಕಳ ವಸತಿ ಶಾಲೆ, ಮಾಣಿಕ್ ಪ್ರಭು ಮಂದಿರ, ರಾಯಚೂರು-584103 |
| | | 161 | ಆಶಾದೀಪ ಟ್ರಸ್ಟ್, ಬಾಲಭವನ, ಸ್ಟೇಷನ್ ರಸ್ತೆ, ರಾಯಚೂರು | ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ |
| | | 162 | ವಿಶ್ವಧರ್ಮ ಮಹಿಳಾ ಮತ್ತು ಶಿಕ್ಷಣ ಸೇವಾಶ್ರಮ ಸಮಿತಿ (ರಿ), ನಿಜಲಿಂಗಪ್ಪ ಕಾಲೋನಿ, ರಾಯಚೂರು | ಬುದ್ಧಿಮಾಂದ್ಯ ಮಕ್ಕಳ ವಸತಿ ಸಹಿತ /ರಹಿತ ಶಾಲೆ |
| | | 163 | ಮಾತೃಆಸರೆ ಶಿಕ್ಷಣ ಸಮಾಜ ಸೇವಾ ಪ್ರತಿಷ್ಠಾನ, ಸಿಂಧನೂರು, ರಾಯಚೂರು ಜಿಲ್ಲೆ | ಬುದ್ಧಿಮಾಂದ್ಯ ಮಕ್ಕಳ ವಸತಿ ರಹಿತ ಶಾಲೆ |
| 29 | ಯಾದಗಿರಿ | 164 | ನಿವೇದಿತ ಎಜುಕೇಷನಲ್ ಟ್ರಸ್ಟ್ (ರಿ), ಯಾದಗಿರಿ | ನಿವೇದಿತ ದೃಷ್ಟಿದೋಷವುಳ್ಳ (ಅಂಧ) ಮಕ್ಕಳ ವಸತಿಯುತ ಶಾಲೆ, ಸಾದರ್ ದರ್‌ವಾಜ್, ಸಿಟಿ ಮುನ್ಸಿಪಲ್ ಕೌನ್ಸಿಲ್ ಎದುರು ಮುಖ್ಯರಸ್ತೆ, ಯಾದಗಿರಿ-582101. ಮೊ.ಸಂ. 9448104694 ದೂ.ಸಂ. 08473 250600 |

## ಅನುಬಂಧ-2

## ಇಲಾಖೆಯು ವಿಕಲಚೇತನರಿಗಾಗಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳು:

**ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ:**

ಈ ಯೋಜನೆಯಡಿ ಬುದ್ಧಿಮಾಂದ್ಯ (ಸೆರಬ್ರಲ್ ಪಾಲ್ಸಿ, ಆಟಿಸಂ), ದೃಷ್ಟಿದೋಷ, ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಹಾಗೂ ವಸತಿರಹಿತ ಶಾಲೆಗಳು ಸೇರಿದಂತೆ ಒಟ್ಟು 151 ವಿಶೇಷ ಶಾಲೆಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿವೆ. 2022-23ನೇ ಸಾಲಿನಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿರುವ ವಿಶೇಷ ಶಾಲೆಗಳ ನಿರ್ವಹಣೆಗೆ ನೀಡಲಾಗುತ್ತಿದ್ದ ಅನುದಾನವನ್ನು ಶೇ.50%ರಷ್ಟು ಹೆಚ್ಚಿಸಿ ಸರ್ಕಾರದ ಆದೇಶ ಸಂಖ್ಯೆ: ಮಮಇ:153:ಪಿಹೆಚ್‌ಪಿ:2020, ದಿ:14.09.2022 ರಲ್ಲಿ ಆದೇಶಿಸಲಾಗಿದೆ. ಈ ಅನುದಾನದಲ್ಲಿ ಶಿಕ್ಷಕರ ಗೌರವಧನ, ಮಕ್ಕಳ ಆಹಾರ ವೆಚ್ಚ, ಕಟ್ಟಡದ ಬಾಡಿಗೆ ಹಾಗೂ ನಿರ್ವಹಣಾ ವೆಚ್ಚ, ಸಮವಸ್ತ್ರ, ವೈದ್ಯಕೀಯ ವೆಚ್ಚ ಹಾಗೂ ಸಾದಿಲ್ವಾರು ವೆಚ್ಚಗಳು ಒಳಗೊಂಡಿರುತ್ತವೆ.

**ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹನ ಧನ:**

ಈ ಯೋಜನೆಯಡಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಆಯಾ ಜಿಲ್ಲಾ ಕಛೇರಿಗಳ ಮೂಲಕ ಆನ್‌ಲೈನ್‌ನಲ್ಲಿ ಮಂಜೂರು ಮಾಡಲಾಗುತ್ತಿದೆ. 2001-02ನೇ ಸಾಲಿನಿಂದ ಈ ಯೋಜನೆಯ ಫಲಾನುಭವಿಗಳಿಗೆ ಆದಾಯ ಮಿತಿಯಿಂದ ವಿನಾಯಿತಿಗೊಳಿಸಲಾಗಿದೆ.

**ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಯೋಜನೆ:**

ಸಾರ್ವತ್ರಿಕ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಯೋಜನೆ ಇದಾಗಿದೆ.

**ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ:**

ಎಸ್.ಎಸ್.ಎಲ್.ಸಿ ನಂತರದ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯಮಿತಿ ಇರುವುದಿಲ್ಲ.

**ಆಧಾರ ಯೋಜನೆ :**

ವಿಕಲಚೇತನರು ಸ್ವಯಂ ಉದ್ಯೋಗ ಕೈಗೊಂಡು ಜೀವನ ಸಾಗಿಸಲು ಅನುಕೂಲವಾಗುವಂತೆ ಆಧಾರ ಸಾಲ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಶೇ.50ರಷ್ಟು ಬ್ಯಾಂಕ್ ಸಾಲ ಮತ್ತು ಶೇ.50ರಷ್ಟು ಸಹಾಯಧನವನ್ನು ಇಲಾಖೆಯಿಂದ ನೀಡಲಾಗುತ್ತದೆ.

**ಗ್ರಾಮೀಣ ಪುನರ್ವಸತಿ ಯೋಜನೆ:**

ಈ ಯೋಜನೆಯನ್ನು ರಾಜ್ಯದ ಎಲ್ಲಾ 31 ಜಿಲ್ಲೆಗಳ 176 ತಾಲ್ಲೂಕುಗಳಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ. ಪ್ರತಿ ಗ್ರಾಮ ಪಂಚಾಯತಿಯಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣ/ ಅನುತ್ತೀರ್ಣರಾದ ಸಮರ್ಥ ವಿಕಲಚೇತನರನ್ನು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರೆಂದು ಹಾಗೂ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಸ್ಥಳೀಯ ಸಮರ್ಥ ಪದವೀಧರ ವಿಕಲಚೇತನರೊಬ್ಬರನ್ನು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರೆಂದು, ಸ್ಥಳೀಯ ನಗರ ಪ್ರದೇಶಗಳಲ್ಲಿ ನಗರ ಪುನರ್ವಸತಿ ಕಾರ್ಯಕರ್ತರೆಂದು 03 ಜಿಲ್ಲೆಗಳಿಗೆ ಒಬ್ಬರಂತೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಂಯೋಜಕರು ಮತ್ತು ನಿರ್ದೇಶನಾಲಯದಲ್ಲಿ ರಾಜ್ಯ ಸಂಯೋಜಕರನ್ನು ಗೌರವಧನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅವಕಾಶವಿದೆ. ಈ ಕಾರ್ಯಕರ್ತರ ಮೂಲಕ ವಿಕಲಚೇತನರಿಗೆ ಎಲ್ಲಾ ಸೇವಾ ಸೌಲಭ್ಯಗಳನ್ನು ಅವರಿರುವ ಸ್ಥಳಗಳಲ್ಲಿಯೇ ತಲುಪಿಸಲಾಗುವುದು. ಗೌರವಧನವನ್ನು ಕ್ರಮವಾಗಿ 6000/- ದಿಂದ 9000/-ಗಳಿಗೆ ಹಾಗೂ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಿಗೆ 12000/- ದಿಂದ 15000/-ಗಳಿಗೆ ಹೆಚ್ಚಿಸಲಾಗಿದೆ.

ಜಿಲ್ಲಾ ಸಂಯೋಜಕರಿಗೆ ನೀಡಲಾಗುತ್ತಿದ್ದ ಗೌರವಧನ ರೂ.13,000/-ಗಳಿಂದ ರೂ.19,000/-ಗಳಿಗೆ ಹಾಗೂ ರಾಜ್ಯ ಸಂಯೋಜಕರಿಗೆ ನೀಡಲಾಗುತ್ತಿದ್ದ ಗೌರವಧನ ರೂ.26,000/-ಗಳಿಂದ ರೂ.38,000/-ಗಳಿಗೆ ಹೆಚ್ಚಿಸಲಾಗಿದೆ.

**ಮರಣ ಪರಿಹಾರ ನಿಧಿ ಯೋಜನೆ:**

ಈ ಯೋಜನೆಯಡಿ ಕಾರ್ಯಕರ್ತರು ನಿಧನಹೊಂದಿದಲ್ಲಿ ರೂ.50,000/-ಗಳಿಂದ ರೂ.1.00 ಲಕ್ಷಗಳಿಗೆ ಹೆಚ್ಚಿಸಲಾಗಿದ್ದು, ಪರಿಹಾರ ಧನ ನೀಡಲು ಅವಕಾಶವಿರುತ್ತದೆ.

**ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯರು ಮದುವೆಯಾದಲ್ಲಿ ಪ್ರೋತ್ಸಾಹ ಧನ ನೀಡುವ ಯೋಜನೆ:**

ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನ ವ್ಯಕ್ತಿಯ ಹೆಸರಿನಲ್ಲಿ ರೂ.50,000/-ಗಳನ್ನು 05 ವರ್ಷದ ಅವಧಿಗೆ ಹೂಡಿಕೆಯ ರೂಪದಲ್ಲಿ ನೀಡಲಾಗುವುದು. ಅದರಿಂದ ಬರುವ ಬಡ್ಡಿ ಹಣವನ್ನು ಫಲಾನುಭವಿಗಳು ಉಪಯೋಗಿಸಬಹುದು ಹಾಗೂ 05 ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರೆಸಲು ಸಹ ಅವಕಾಶವಿರುತ್ತದೆ.

**ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಭತ್ಯೆ ಒದಗಿಸುವ ಯೋಜನೆ :**

ಅಂಧ ಮಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರೆ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟಕರವಾಗಿರುತ್ತದೆ. ಇಂತಹ ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಮಾಡಲು ಆಯಾ ಸೇವೆ, ಆರೋಗ್ಯ ಪಾಲನೆ, ಪೌಷ್ಠಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.2000/- ದಂತೆ 5 ವರ್ಷಗಳ ಅವಧಿಗೆ ಸಹಾಯಧನವನ್ನು ನೀಡಲಾಗುತ್ತಿದೆ. ಈ ಸೌಲಭ್ಯವನ್ನು ಗರಿಷ್ಠ 2 ಮಕ್ಕಳವರೆಗೆ ಪಡೆಯಬಹುದಾಗಿದೆ.

**ಸಾಧನ ಸಲಕರಣೆಗಳು :**

ಈ ಯೋಜನೆಯಡಿಯಲ್ಲಿ ವಿಕಲಚೇತನರಿಗೆ ಅವಶ್ಯವಾಗಿರುವ ಸಾಧನ ಸಲಕರಣೆಗಳನ್ನು (ಕ್ಯಾಲಿಪರ್ಸ್, ಬ್ರೈಲ್ ವಾಚ್, ವಾಕಿಂಗ್ ಸ್ಟಿಕ್, ಕ್ರಚಸ್, ಊರುಗೋಲು, ಶ್ರವಣಸಾಧನ ಇನ್ನು ಮುಂತಾದವುಗಳು) ರೂ.15,000/-ಗಳ ಮಿತಿಯೊಳಗೆ ಉಚಿತವಾಗಿ ನೀಡಲಾಗುತ್ತದೆ. ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದ ರೂ.11,500/- ಮತ್ತು ನಗರ ಪ್ರದೇಶದಲ್ಲಿ ರೂ.24,000/- ನಿಗದಿಗೊಳಿಸಲಾಗಿದೆ. ಫಲಾನುಭವಿಗಳು ಅರ್ಜಿಯನ್ನು ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ, ಸೌಲಭ್ಯ ಪಡೆಯಬಹುದು.

**ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ :**

ಎಸ್.ಎಸ್.ಎಲ್.ಸಿ ನಂತರ ವ್ಯಾಸಂಗ ಮಾಡುವ ದೃಷ್ಟಿದೋಷವುಳ್ಳ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಪಡೆಯಲು ಅನುಕೂಲವಾಗುವಂತೆ ಮಾತನಾಡುವ (ಟಾಕಿಂಗ್) ಲ್ಯಾಪ್‌ಟಾಪ್‌ಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿದೆ.

**ತೀವ್ರತೆರನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ ಯೋಜನೆ**

20 ರಿಂದ 60 ವರ್ಷದ ವಯೋಮಾನದ ತೀವ್ರತರವಾದ ದೈಹಿಕ ವಿಕಲಚೇತನರ ಕುಟುಂಬದ ವಾರ್ಷಿಕ ವರಮಾನ ರೂ.2.00 ಲಕ್ಷಗಳಿಗಿಂತ ಕಡಿಮೆ ಇರುವ ವಿಕಲಚೇತನರಿಗೆ ಅನುಕೂಲವಾಗುವಂತೆ ಜೀವಿತ ಕಾಲದಲ್ಲಿ ಒಂದು ಬಾರಿ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ಒದಗಿಸಲಾಗುತ್ತಿದೆ.

**ಶ್ರವಣದೋಷವುಳ್ಳ ವ್ಯಕ್ತಿಗಳ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರಗಳು:**

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಶ್ರವಣದೋಷವುಳ್ಳ ವ್ಯಕ್ತಿಗಳ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರಗಳನ್ನು ಖರೀದಿಸಿ ವಿತರಿಸಲಾಗುತ್ತಿದೆ. ಹೊಲಿಗೆ ಯಂತ್ರವನ್ನು ವಿತರಿಸಲು ನಿರ್ದೇಶನಾಲಯದಲ್ಲಿ ಟೆಂಡರ್ ಕರೆಯಲಾಗಿ ಸಂಸ್ಥೆಯನ್ನು ಆಯ್ಕೆ ಮಾಡಲಾಗುವುದು ನಂತರ ಜಿಲ್ಲಾ ಮಟ್ಟದಲ್ಲಿ ಆಯ್ಕೆ ಸಮಿತಿಯನ್ನು ರಚಿಸಿದ್ದು, ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಸಭೆಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಹೊಲಿಗೆ ಯಂತ್ರವನ್ನು ವಿತರಿಸಲಾಗುವುದು.

**ದೃಷ್ಟಿದೋಷವುಳ್ಳ ವ್ಯಕ್ತಿಗಳಿಗೆ ಬ್ರೈಲ್ ಕಿಟ್:**

ಅಂಧ ವಿದ್ಯಾರ್ಥಿಗಳು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಸ್ವಾವಲಂಬಿಗಳಾಗಲು ರಾಜ್ಯದ ೫೦೦ ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಮೊಬೈಲ್, ಬ್ರೈಲ್ ವಾಚ್, ವಾಕಿಂಗ್ ಸ್ಟಿಕ್ ಮತ್ತು ಇನ್ನಿತರ ಸಾಧನಗಳನ್ನು ಒಳಗೊಂಡ ಖರೀದಿಸಿ ವಿತರಿಸಲಾಗುತ್ತಿದೆ.

**ಬ್ಯಾಟರಿ ಚಾಲಿತ ವ್ಹೀಲ್ ಚೇರ್‌ಗಳನ್ನು ವಿತರಿಸುವ ಯೋಜನೆ:**

2023-24ನೇ ಸಾಲಿನಿಂದ ಬ್ಯಾಟರಿ ಚಾಲಿತ ವ್ಹೀಲ್ ಚೇರ್‌ಗಳನ್ನು ವಿಕಲಚೇತನರಿಗೆ ಅನುಕೂಲವಾಗುವಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ದೈಹಿಕ ವಿಕಲಚೇತನರಿಗೆ ಬ್ಯಾಟರಿ ಚಾಲಿತ ವ್ಹೀಲ್ ಚೇರ್‌ಗಳನ್ನು ವಿತರಿಸಲಾಗುತ್ತಿದೆ.

**ಅಂಗವಿಕಲತೆಯನ್ನು ನಿವಾರಿಸುವ ಶಸ್ತ್ರಚಿಕಿತ್ಸೆಗಾಗಿ ವೈದ್ಯಕೀಯ ಪರಿಹಾರ ನಿಧಿ ಯೋಜನೆ:-**

ಅಂಗವಿಕಲ ವ್ಯಕ್ತಿಗಳಿಗೆ ಅಂಗವಿಕಲತೆಯನ್ನು ನಿವಾರಿಸಲು ಶಸ್ತ್ರ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆ, ಸಂಜಯಗಾಧಿ ಆಸ್ಪತ್ರೆಗಳಲ್ಲಿ ಹಾಗೂ ಸುಸಜ್ಜಿತ ಖಾಸಗಿ ಆಸ್ಪತ್ರೆಗಳಲ್ಲಿ ಅಂಗವಿಕಲತೆ ನಿವಾರಣಾ ಶಸ್ತ್ರ ಚಿಕಿತ್ಸೆಗಾಗಿ ರೂ.1.00 ಲಕ್ಷಗಳವರೆಗೆ ಸಹಾಯ ಧನವನ್ನು ಮಂಜೂರು ಮಾಡಲಾಗುತ್ತಿದೆ.

**ಸಾಧನೆ ಮತ್ತು ಪ್ರತಿಭೆ ಯೋಜನೆ:**

ವಿಕಲಚೇತನರು ನೀಡುವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡುವ ಸಲುವಾಗಿ "ಪ್ರತಿಭೆ" ಎಂಬ ಯೋಜನೆಯನ್ನು ಹಾಗೂ ಅಂಗವಿಕಲ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡಲು "ಸಾಧನೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ಕ್ರೀಡೆಗಳಲ್ಲಿ ವಿಶೇಷ ಸಾಧನೆಗೈದ ವಿಕಲಚೇತನರಿಗೆ ರೂ.50,000/-ಗಳ ಧನ ಸಹಾಯವನ್ನು ನೀಡಲಾಗುತ್ತಿದೆ.

**ನಿರಾಮಯ ಆರೋಗ್ಯ ವಿಮಾ ಯೋಜನೆ : (ಆಟಿಸಂ, ಸೆರೆಬ್ರಲ್ ಪಾಲ್ಸಿ, ಬೌದ್ಧಿಕ ಅಂಗವಿಕಲತೆ ಮತ್ತು ಬಹುವಿಧ ಅಂಗವಿಕಲತೆ)**

ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲತೆಗೆ ಒಳಗಾದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ವಿಕಲಚೇತನರಿಗೆ ನಿರಾಮಯ ಎಂಬ ಆರೋಗ್ಯ ವಿಮಾ ಯೋಜನೆಯು ಜಾರಿಯಲ್ಲಿದ್ದು, ಮೇಲೆ ವಿವರಿಸಿದ ಅಂಗವಿಕಲತೆ ಹೊಂದಿರುವ ಪ್ರತಿ ವ್ಯಕ್ತಿಗೆ ವರ್ಷಕ್ಕೆ ಒಂದು ಬಾರಿಗೆ ಪ್ರೀಮಿಯಂ ಮೊತ್ತ ರೂ.250/-ಗಳನ್ನು ನ್ಯಾಷನಲ್ ಟ್ರಸ್ಟ್ ಸಂಸ್ಥೆಗೆ ಪಾವತಿಸಲಾಗುವುದು. ಪ್ರತಿ ವರ್ಷ ಯೋಜನೆಯಡಿ ಬರುವ ಫಲಾನುಭವಿಗಳು ರೂ.1.00 ಲಕ್ಷಗಳವರೆಗೆ ವೈದ್ಯಕೀಯ ಸೌಲಭ್ಯ ಪಡೆಯಬಹುದಾಗಿರುತ್ತದೆ.

**<u>ಸ್ಪರ್ಧಾ ಚೇತನ:-</u>**

ಈ ಯೋಜನೆಯಡಿ ಐ.ಎ.ಎಸ್./ಕೆ.ಎ.ಎಸ್. ಹಾಗೂ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸರ್ಕಾರದ ಇತರೆ ಇಲಾಖೆಗಳಡಿ ಗುರುತಿಸಲ್ಪಟ್ಟ ಪರೀಕ್ಷಾ ಪೂರ್ವ ತರಬೇತಿ ಕೇಂದ್ರಗಳು ಹಾಗೂ ಈ ಇಲಾಖೆಯಿಂದ ಗುರುತಿಸಲ್ಪಟ್ಟ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುವ ವಿಕಲಚೇತನರಿಗೆ ಮಾರ್ಗಸೂಚಿಯಲ್ಲಿ ನಿಗದಿಪಡಿಸಿದ ಮೊತ್ತವನ್ನು ಪಾವತಿಸಲಾಗುವುದು.

**ಆರೈಕೆದಾರರ ಭತ್ಯೆ:-**

ಸೆರಬ್ರಲ್ ಪಾಲ್ಸಿ, ಮಸ್ಕ್ಯುಲರ್ ಡಿಸ್ಟ್ರೋಫಿ, ಪಾರ್ಕಿನ್‌ಸನ್ ಮತ್ತು ಮಲ್ಟಿಪಲ್ ಸ್ಕ್ಲೆರೋಸಿಸ್ ಖಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಗಳ ಆರೈಕೆದಾರರಿಗೆ ಪ್ರತಿ ಮಾಹೆ ರೂ.1,000/-ಗಳ ಪ್ರೋತ್ಸಾಹ ಧನ ನೀಡುವ ಯೋಜನೆಯನ್ನು 2024-25ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ನಿರ್ದೇಶಕರು,
ವಿಕಲಚೇತನರ ಹಾಗೂ ಹಿರಿಯ
ನಾಗರಿಕರಣ ಸಬಲೀಕರಣ ಇಲಾಖೆ,
ಬೆಂಗಳೂರು.